ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಡಿಸೆಂಬರ್ 02, 2024

ಸಂಪುಟ : 51 ಸಂಚಿಕೆ : 199 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





**ಥೀಮ್ ಪಾರ್ಕ್...** ದಾವಣಗೆರೆ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ನಿರ್ಮಿಸಲಾಗಿರುವ ಥೀಮ್ ಪಾರ್ಕ್ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿದೆ. ಭಾನುವಾರ ಪೋಷಕರು, ಮಕ್ಕಳು ಥೀಮ್ ಪಾರ್ಕ್‌ನಲ್ಲಿರುವ ಕಲಾಕೃತಿ ವೀಕ್ಷಿಸಿ ಸಂತಸ ಪಟ್ಟರು. ಫೋಟೋಗಳಲ್ಲಿ ಸಂತಸ ಸೆರೆ ಹಿಡಿದುಕೊಂಡರು.

# ಲಿಂಗಾಯತ ಜಾತಿಯಲ್ಲ, ಇದೊಂದು ಶ್ರೇಷ್ಠ ಧರ್ಮ

## 'ದತ್ತಿ ಕಾರ್ಯಕ್ರಮ ಮತ್ತು ವಿಶೇಷ ಉಪನ್ಯಾಸ' ಸಭೆಯಲ್ಲಿ ಬಸವ ಧಾಮದ ಬಸವೇಶ್ವರಿ ಮಾತಾಜಿ

ದಾವಣಗೆರೆ, ಡಿ.1- ಹನ್ನೆರಡನೇ ಶತಮಾನದಲ್ಲಿ ಹುಟ್ಟಿಕೊಂಡ ಲಿಂಗಾಯತವು ಜಾತಿಯಲ್ಲ, ಇದೊಂದು ಶ್ರೇಷ್ಠ ಧರ್ಮ ಎಂದು ಅತ್ತಿವೇರಿ ಬಸವ ಧಾಮದ ಬಸವೇಶ್ವರಿ ಮಾತಾಜಿ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ ಮೀನಾಕ್ಷಮ್ಮ, ಲಿಂ. ವೀರಭದ್ರಪ್ಪ ದತ್ತಿ ಪ್ರಯುಕ್ತ ನಗರದ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಬಸವ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ದತ್ತಿ ಕಾರ್ಯಕ್ರಮ ಮತ್ತು ವಿಶೇಷ ಉಪನ್ಯಾಸ' ಸಭೆಯಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಮಾಜಲ್ಲಿದ್ದ ಕಂದಾಚಾರ, ಮೂಢನಂಬಿಕೆ ಮತ್ತು ಮೇಲು-ಕೀಳು ಎಂಬ ಇತರೆ ಪಿಡುಗುಗಳನ್ನು ಶೋಧಿಸಿ ಶ್ರೇಷ್ಠ ಲಿಂಗಾಯತ ಧರ್ಮ ರಚನೆಯಾಗಿದೆ ಎಂದು ಹೇಳಿದರು.

ಲಿಂಗಾಯತ ವಿಶ್ವ ಧರ್ಮ ಆಗಬೇಕಿತ್ತು. ಆದರೆ ಈ ಧರ್ಮದಲ್ಲಿ ಬರುವ 108 ಪಂಗಡದವರು ಒಬ್ಬರನ್ನೊಬ್ಬರು ದ್ವೇಷಿಸುವ ಮೂಲಕ ಧರ್ಮಕ್ಕೆ ಕಲ್ಲು ಹೊಡೆಯುವ ಕಾರ್ಯ ಮಾಡುತ್ತಿದ್ದಾರೆ. ಇಂತಹ ಮನಸ್ಥಿತಿಯನ್ನು ಎಲ್ಲರೂ ತ್ಯಜಿಸಬೇಕು ಎಂದು ತಿಳಿಸಿದರು.

ವಿಶ್ವಗುರು ಬಸವಣ್ಣನವರು ಚಿಕ್ಕವರಿದ್ದಾಗ ಅಸಮಾನತೆಯನ್ನು ಪ್ರಶ್ನಿಸುತ್ತಿದ್ದರು. ಇಂತಹ ಮನೋಭಾವ ಪ್ರಸಕ್ತ ದಿನಗಳಲ್ಲಿ ಯುವಕರಲ್ಲಿ ಕಾಣುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಲಿಂಗಾಯತ ಧರ್ಮದಲ್ಲಿ ಪುರುಷರಿಗೆ ಇರುವ ಹಕ್ಕು ಬಾಧ್ಯತೆಗಳಷ್ಟೇ ಸಮಾನ ಹಕ್ಕು ಮಹಿಳೆಯರಿಗೂ ಇದೆ. ಆದ್ದರಿಂದ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರೂ ಗುರು ಬಸವರನ್ನು



ಗೌರವಿಸಿ, ಪೂಜಿಸಬೇಕೆಂದು ಮನವಿ ಮಾಡಿದರು.

ಸಮಾಜದಲ್ಲಿನ ಓರೆ-ಕೋರೆಗಳನ್ನು ಹಾಗೂ ಜನರನ್ನು ಜಾಗೃತರನ್ನಾಗಿಸಲು ವಚನ ಸಾಹಿತ್ಯ ಜನಿಸಿತು.ಹಾಗಾಗಿ ನೈಜ ವಾಸ್ತವ ಅರಿಯಲು ಎಲ್ಲರೂ ಬಸವಣ್ಣನವರ ವಚನವನ್ನು ಅಧ್ಯಯನ ಮಾಡಬೇಕು ಎಂದು ಹೇಳಿದರು.

ಜನಗಣತಿಯಲ್ಲಿ ಮೊದಲು 21 ಪರ್ಸೆಂಟ್ ಇದ್ದವರು 18 ಪರ್ಸೆಂಟ್ ಆದರು, ನಂತರ ಶೇ.14 ಪರ್ಸೆಂಟಿಗೆ ಬಂದೆವು, ಈಗ 7-8 ಪರ್ಸೆಂಟ್ ಇದ್ದಾರೆ ಎಂಬ ವರದಿ ಇವೆ. ಇದಕ್ಕೆ ಮಾರಕವಾಗಿರುವವರೇ ನಾವು ಎಂದು ತಿಳಿಸಿದರು.

ಇದೇ ವೇಳೆ ದತ್ತಿ ದಾಸೋಹಿಗಳಾದ ಮಧುಮತಿ, ಗಿರೀಶ್ ದೇವಿಗೆರೆ ಮತ್ತು 'ಶರಣರ ಶಕ್ತಿ' ಚಲನಚಿತ್ರ ನಿರ್ದೇಶಕ ದಿಲೀಪ್ ವಿ ಶರ್ಮಾ ಅವರನ್ನು ಸನ್ಮಾನಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗುರು ಬಸವ ಮಂಟಪದ ಎಂ. ಹನುಮಂತಪ್ಪ ಐಗೂರು, ಬಸವ ಬಳಗದ ಎ.ಹೆಚ್. ಹುಚ್ಚಪ್ಪ ಮಾಸ್ತರ್, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಉಪಾಧ್ಯಕ್ಷ ಎನ್.ಎಸ್. ರಾಜು, ಗೌರವ ಸಲಹೆಗಾರ ಹೆಚ್.ಕೆ. ಲಿಂಗರಾಜು, ಎಂ. ಪರಮೇಶ್ವರಪ್ಪ, ಗಾಯತ್ರಿ ವಸ್ತ್ರದ್ ಮತ್ತಿತರರಿದ್ದರು.

# ವಕ್ಫ್ ವಿರುದ್ಧ ರಸ್ತೆಗಿಳಿದು ಹೋರಾಟಕ್ಕೆ ಬನ್ನಿ

## ಇಷ್ಟವಿಲ್ಲದಿದ್ದರೆ ನೀವೇ ಪ್ರತ್ಯೇಕವಾಗಿ ಹೋರಾಡಿ ವಿಜಯೇಂದ್ರಗೆ ಅರವಿಂದ ಲಿಂಬಾವಳಿ ತರಾಟೆ

ಬೆಳಗಾವಿ, ಡಿ.1- ರಾಜ್ಯದಲ್ಲಿ ಉಪಚುನಾವಣೆ ಮುಗಿದು ಬಹಳ ದಿನಗಳಾಯಿತು. ಇನ್ನಾದರೂ ನಮ್ಮ ಜತೆಗೆ ಸೇರಿಕೊಂಡು, ವಕ್ಫ್ ಮಂಡಳಿ ವಿರುದ್ಧ ರಸ್ತೆಗಿಳಿದು ಹೋರಾಟಕ್ಕೆ ಬನ್ನಿ. ನಮ್ಮೊಂದಿಗೆ ಬರಲು ಇಷ್ಟ ಇಲ್ಲದಿದ್ದರೆ ನೀವೇ ಪ್ರತ್ಯೇಕವಾಗಿ ಹೋರಾಡಿ. ನಮ್ಮ ಪಾಲಿಗೆ ನಾವು ಹೋರಾಟ ಮಾಡುತ್ತೇವೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಬಿಜೆಪಿ ಜಿಲ್ಲಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಕಿಡಿಕಾರಿದ್ದಾರೆ.

ವಕ್ಫ್ ಮಂಡಳಿಯ ಭೂಕಬಳಿಕೆ ವಿರೋಧಿಸಿ, ಯತ್ನಾಳ ನೇತೃತ್ವದ ಬಿಜೆಪಿಯವರು ಭಾನುವಾರ ಹಮ್ಮಿಕೊಂಡಿದ್ದ ಜನಜಾಗೃತಿ ಹೋರಾಟ ಸಮಾವೇಶದಲ್ಲಿ ಅವರು ಮಾತನಾಡಿದರು.

ವಕ್ಫ್ ಮಂಡಳಿಯ ಭೂಕಬಳಿಕೆ ವಿರುದ್ಧದ ಹೋರಾಟ ಜನಪರವಾದದ್ದು. ಇದರ ನೇತೃತ್ವ ವಹಿಸಿದ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸುತ್ತೇನೆ ಎನ್ನುತ್ತೀರಾ?' ಎಂದವರು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಹೊಂದಾಣಿಕೆ ರಾಜಕಾರಣ ಮಾಡಲು ನಿಮ್ಮನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿಲ್ಲ. ಹುಷಾರ್!' ಎಂದು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ.

ಜನಪರವಾಗಿ ಕೆಲಸ ಮಾಡಲೆಂದು ನಿಮ್ಮನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರೆ, ನೀವು ಹಾದಿಬೀದಿಯಲ್ಲಿ ನಿಂತು ಮಾತನಾಡುತ್ತೀರಾ? ನಾವು ಹಾದಿಬೀದಿಯಲ್ಲಿ ನಿಂತು ಹೇಳಿಕೆ ಕೊಡುತ್ತಿಲ್ಲ. ಬೆಂಗಳೂರಿನಲ್ಲಿ ಕುಳಿತು ನೀವೇ ಗೊಂದಲ ಸೃಷ್ಟಿಸುತ್ತಿದ್ದೀರಿ. ಇದು ಪಕ್ಷಕ್ಕೂ ಹಾಗೂ ನಿಮಗೂ ಗೌರವ ತರವುದಿಲ್ಲ.

ನೀವು ಹೊಂದಾಣಿಕೆ ರಾಜಕಾರಣ ಮಾಡಿದ್ದರಿಂದ ನಾವು ಇಂದು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ತಾವು ಚುನಾವಣೆಯಲ್ಲಿ ಏನೇನು ಮಾಡಿದ್ದೀರಿ ಎಂದು ಹೇಳುವ ಸಂದರ್ಭ ಇದಲ್ಲ. ಜನರು ಬಿಜೆಪಿ ಮೇಲೆ ನಂಬಿಕೆ ಇಟ್ಟಿದ್ದಾರೆ. ನೀವು ಜನರ ಜತೆಗೆ ಹೋರಾಟಕ್ಕೆ ಇಳಿಯಿರಿ. ಆಗ ಶಹಬ್ಬಾಸ್ ಎನ್ನುತ್ತೇವೆ' ಎಂದು ಲಿಂಬಾವಳಿ ಹೇಳಿದರು.

**ಗೌಪ್ಯ ಸಭೆ:** ಸಮಾವೇಶಕ್ಕೂ ಮುನ್ನ, ನಗರದ ಹೋಟೆಲ್‌ನಲ್ಲಿ ಶಾಸಕರಾದ ರಮೇಶ್ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಮುಖಂಡರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಜಿ.ಎಂ. ಸಿದ್ದೇಶ್ವರ, ಪ್ರತಾಪ್ ಸಿಂಹ ಮತ್ತಿತರರು ಗೌಪ್ಯ ಸಭೆ ನಡೆಸಿ ಚರ್ಚಿಸಿದರು.

### ದಾವಣಗೆರೆ ಸಮಾವೇಶಕ್ಕೆ 10 ಲಕ್ಷ ಜನ ಸೇರಿಸ್ತೇವೆ

ಬೆಳಗಾವಿ, ಡಿ.1- ವಕ್ಫ್ ವಿರುದ್ಧದ ಹೋರಾಟದ ಕೊನೆಗೆ ದಾವಣಗೆರೆಯಲ್ಲಿ ಸಮಾವೇಶ ಮಾಡುತ್ತೇವೆ. ಅಲ್ಲಿ 10 ಲಕ್ಷ ಜನರನ್ನು ಸೇರಿಸುತ್ತೇವೆ ಎಂದು ಶಾಸಕ ರಮೇಶ್ ಜಾರಕಿಹೊಳಿ ಹೇಳಿದ್ದಾರೆ.

ಬೆಳಗಾವಿಯಿಂದ 1 ಲಕ್ಷ ಜನರನ್ನು ಕರೆದೊಯ್ಯುತ್ತೇವೆ. ಸಮಾವೇಶಕ್ಕೆ ಸಾಕಷ್ಟು ಖರ್ಚಾಗುತ್ತದೆ. ಈ ಪೈಕಿ ಬೆಳಗಾವಿಯ ಬಿಜೆಪಿ ಕಾರ್ಯಕರ್ತರಿಂದ 1 ಕೋಟಿ ರೂ. ನಿಧಿ ನೀಡುತ್ತೇವೆ. ನಾನು, ಯತ್ನಾಳ ಸೇರಿ ನಾಯಕರೇ ಸಮಾವೇಶಕ್ಕೆ ಬೇಕಿರುವ ಹಣ ಕೊಡಬಹುದಿತ್ತು. ಹಾಗೆ ಮಾಡಿದರೆ ನಾವು 'ಪೂಜ್ಯ ತಂದೆ, ಪೂಜ್ಯ ಮಗ' ಆಗುತ್ತೇವೆ. ಹಾಗಾಗಿ ಕಾರ್ಯಕರ್ತರಿಂದ ಹಣ ಸಂಗ್ರಹಿಸುತ್ತೇವೆ ಎಂದು ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ರಮೇಶ ಜಾರಕಿಹೊಳಿ ಆಪರೇಷನ್ ಮಾಡಿದ್ದರಿಂದ ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಈಗ ನಮ್ಮನ್ನು ಆಪರೇಷನ್ ಮಾಡುತ್ತಾರಂತೆ. ಇಡೀ ರಾಜ್ಯದಲ್ಲಿ ಆಪರೇಷನ್ ಮಾಡುವಲ್ಲಿ ನಾವು ಟಾಪ್‌ಮೋಸ್ಟ್ ಡಾಕ್ಟರ್‌ಗಳಿದ್ದೇವೆ. ನಮ್ಮನ್ನು ಆಪರೇಷನ್ ಮಾಡಿದರೆ ನಿಮ್ಮ ನರನಾಡಿಗಳನ್ನೇ ಕಟ್ ಮಾಡುತ್ತೇವೆ' ಎಂದು ಪರೋಕ್ಷವಾಗಿ ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ಹರಿಹಾಯ್ದರು.

# ನಿಖಿಲ್‌ಗೆ ಮಾರ್ಗದರ್ಶನ ನೀಡುವ ಜವಾಬ್ದಾರಿ ನಿಮ್ಮದು: ಕುಮಾರ ಸ್ವಾಮಿ

ರಾಮನಗರ, ಡಿ.1- ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭವಿಷ್ಯದ ನಾಯಕರಾಗಲಿದ್ದು, ಅವರನ್ನು ಪಕ್ಷಕ್ಕೆ ಒಪ್ಪಿಸುತ್ತಿದ್ದು, ಮಾರ್ಗದರ್ಶನ ನೀಡುವ ಜವಾಬ್ದಾರಿ ನಿಮಗಿದೆ ಎಂದು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಭಾನುವಾರ ಬಿಡದಿಯ ತಮ್ಮ ನಿವಾಸದಲ್ಲಿ ಜೆಡಿಎಸ್ ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು ಮತ್ತು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರುಗಳ ಜೊತೆಗಿನ ಸಭೆಯಲ್ಲಿ ಅವರು ಮಾತನಾಡಿದರು.

ಪಕ್ಷ ಬಲವರ್ಧನೆ ಮತ್ತು ಸಂಘಟನೆಯ ದೃಷ್ಟಿಯಿಂದ ರಾಜ್ಯಾದ್ಯಂತ ಮತ್ತೆ ಸದಸ್ಯತ್ವ ನೋಂದಣಿ ಪುನರಾರಂಭವಾಗಬೇಕು ಎಂದು ಸಚಿವರು ಪಕ್ಷದ ಮುಖಂಡರುಗಳಿಗೆ ಸೂಚನೆ ನೀಡಿದರು.

ಪಕ್ಷದಲ್ಲಿ ಅಸಮಾಧಾನಗಳಿದ್ದರೆ, ಅವುಗಳನ್ನು ಬಗೆಹರಿಸಿಕೊಳ್ಳಬೇಕು. ನಮ್ಮ ಪಕ್ಷವು ಕಾರ್ಯಕರ್ತರಿಗೋಸ್ಕರ



ಜೆಡಿಎಸ್ ಶಾಸಕರು, ಸಚಿವರ, ಮುಖಂಡರ, ಕಾರ್ಯಕ್ರತರ ಸಭೆ

ಇರುವ ಪಕ್ಷ. ಜಾತಿ ರಾಜಕಾರಣದಲ್ಲಿ ನಮಗೆ ನಂಬಿಕೆ ಇಲ್ಲ. ಎಲ್ಲ ಸಮುದಾಯಗಳನ್ನು ನಮ್ಮೊಂದಿಗೆ ಕೊಂಡೊಯ್ಯಲು ಬದ್ಧರಾಗಿದ್ದೇವೆ. ನಾವು ಒಗ್ಗಟ್ಟಿನಿಂದ ಇದ್ದರೆ, (4ನೇ ಪುಟಕ್ಕೆ)

# ಐಸಿಸಿ ಅಧ್ಯಕ್ಷರ ಜವಾಬ್ದಾರಿ ವಹಿಸಿಕೊಂಡ ಜಯ್ ಶಾ



ನವದೆಹಲಿ, ಡಿ.1- ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಇಂದಿನಿಂದ ಹೊಸ ಐಸಿಸಿ ಅಧ್ಯಕ್ಷರ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಐಸಿಸಿ ಅಧ್ಯಕ್ಷ ಗ್ರೆಗ್ ಬಾರ್ಕ್ಲೇ ಅವರ ಸ್ಥಾನವನ್ನು ಜಯ್ ಶಾ ವಹಿಸಿಕೊಂಡರು.

ಐಸಿಸಿ ಅಧ್ಯಕ್ಷರ ಹುದ್ದೆಗೆ ಶಾ ಅವಿರೋಧವಾಗಿ ಆಯ್ಕೆಯಾಗಿದ್ದು, ಇಂದೇ ಅಧಿಕಾರ ವಹಿಸಿಕೊಂಡರು. ಇದರ ಬೆನ್ನಲ್ಲೇ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಅನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ತಯಾರಿ ನಡೆಸುವುದಾಗಿ ಹೇಳಿದ್ದು ಮಹಿಳಾ ಕ್ರಿಕೆಟ್‌ಗೂ ಉತ್ತೇಜನ ನೀಡಲಾಗುವುದು ಎಂದು ತಿಳಿಸಿದ್ದಾರೆ.

2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಕ್ರೀಡೆಯನ್ನು ಪ್ರಮುಖ ಅವಕಾಶವಾಗಿ ಸೇರಿಸುವುದು ಮತ್ತು ಮಹಿಳಾ ಆಟದ ಬೆಳವಣಿಗೆಯನ್ನು ಒಳಗೊಂಡಿರುತ್ತದೆ ಎಂದವರು ಹೇಳಿದ್ದಾರೆ.

ಕ್ರಿಕೆಟ್ ಜಾಗತಿಕ ಮಟ್ಟದಲ್ಲಿ ಅಪಾರ ಸಾಮರ್ಥ್ಯವನ್ನು ಹೊಂದಿದೆ. ಈ ಅವಕಾಶಗಳನ್ನು (6ನೇ ಪುಟಕ್ಕೆ)

# ಆಂಧ್ರ ಪ್ರದೇಶದಲ್ಲಿ ವಕ್ಫ್ ಮಂಡಳಿ ರದ್ದು

ಅಮರಾವತಿ, ಡಿ.1- ದೇಶಾದ್ಯಂತ ವಕ್ಫ್ ಮಸೂದೆ ಮತ್ತು ಕರ್ನಾಟಕದಲ್ಲಿ ವಕ್ಫ್ ವಿವಾದಗಳ ವಿಚಾರ ವ್ಯಾಪಕ ಸುದ್ದಿಗೆ ಗ್ರಾಸವಾಗಿರುವಂತೆಯೇ ಅತ್ತ ಆಂಧ್ರ ಪ್ರದೇಶ ಸರ್ಕಾರ ವಕ್ಫ್ ಮಂಡಳಿಯನ್ನೇ ವಜಾಗೊಳಿಸಿ ಆದೇಶ ಹೊರಡಿಸಿದೆ.

ವಕ್ಫ್ ಮಂಡಳಿಗೆ ಸಂಬಂಧಿಸಿದಂತೆ ಆಂಧ್ರಪ್ರದೇಶ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದ್ದು, ಹಿಂದಿನ ಸಿಎಂ ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ ಸರ್ಕಾರ ರಚಿಸಿದ್ದ ವಕ್ಫ್ ಬೋರ್ಡ್ ಅನ್ನು ಆಂಧ್ರ ಪ್ರದೇಶ ಸರ್ಕಾರ ವಿಸರ್ಜಿಸಿದೆ.

ಈ ಕುರಿತು ಶನಿವಾರ ಆದೇಶ ಹೊರಡಿಸಲಾಗಿದೆ ಎಂದು ರಾಜ್ಯ ಕಾನೂನು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಎನ್.ಎಂ.ಡಿ.ಫಾರೂಕ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

# ಬ್ರಹ್ಮಗಂಟು ಖ್ಯಾತಿಯ ನಟಿ ಶೋಭಿತಾ ಆತ್ಮಹತ್ಯೆ



ಬೆಂಗಳೂರು, ಡಿ.1- ಜೀ ಕನ್ನಡದಲ್ಲಿ ಪ್ರಸಾರ ವಾಗುತ್ತಿದ್ದ 'ಬ್ರಹ್ಮಗಂಟು' ಧಾರಾವಾಹಿ ಖ್ಯಾತಿಯ ನಟಿ ಶೋಭಿತಾ ಶಿವಣ್ಣ ಹೈದರಾಬಾದಿನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮೂಲತಃ ಹಾಸನ ಜಲ್ಲೆ ಸಕಲೇಶಪುರದ ಶೋಭಿತಾ ಶಿವಣ್ಣ, ಬ್ರಹ್ಮಗಂಟು ಧಾರಾವಾಹಿಯಲ್ಲಿ ವಿಲನ್ ಆಗಿ ಕಾಣಿಸಿಕೊಳ್ಳುವ ಮೂಲಕ ಸಾಕಷ್ಟು ಅಭಿಮಾನಿಗಳನ್ನು ಸಂಪಾದಿಸಿದ್ದಾರೆ.

2023ರ ಮೇ 22 ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದ ಶೋಭಿತಾ ಕಿರುತೆರೆಯಿಂದ ದೂರವಾಗಿ ಹೈದರಾಬಾದ್‌ನಲ್ಲಿ ವಾಸವಾಗಿದ್ದರು. ಆದರೆ, ಮಧ್ಯರಾತ್ರಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. ಆದರೆ, ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

# ದೇಶಕ್ಕೆ ಸಂವಿಧಾನವೇ ಶ್ರೇಷ್ಠ ಗ್ರಂಥ : ದೇವೇಂದ್ರಪ್ಪ

## ಅಸ್ಪೃಶ್ಯತಾ ನಿವಾರಣೆ, ಜಾಗೃತಿ ಕಾರ್ಯಕ್ರಮದಲ್ಲಿ ಜಗಳೂರು ಶಾಸಕರ ಅಭಿಮತ

ಜಗಳೂರು, ಡಿ.1- ವೈವಿಧ್ಯತೆಯಲ್ಲಿ ಏಕತೆ ಸಾರುವ ದೇಶದಲ್ಲಿ ಸಂವಿಧಾನವೇ ಪವಿತ್ರ ಗ್ರಂಥ ವಾಗಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಕಂದಾಯ, ಪೊಲೀಸ್, ತಾಲ್ಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಸ್ಪೃಶ್ಯತಾ ನಿವಾರಣೆ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನಬದ್ಧ ಹಕ್ಕುಗಳಿಗಾಗಿ ಹೋರಾಟ ಅನಿವಾರ್ಯ. ಮೀಸಲಾತಿ ಹಕ್ಕುಗಳಿಂದ ಶೋಷಿತ ಸಮುದಾಯಗಳು ಮುಖ್ಯವಾಹಿನಿಗೆ ಬಂದಿವೆ ಎಂದರು.

ಕೇವಲ ಹೋರಾಟದಿಂದ ನ್ಯಾಯ ಸಿಗದು. ಛಲ, ಪರಿಶ್ರಮ ಹಾಗೂ ಶಿಕ್ಷಣದಿಂದ ಮಾತ್ರ ಬದಲಾವಣೆ ಹಾಗೂ ಗುರಿ ಸಾಧಿಸಬಹುದು ಎಂದು ಹೇಳಿದರು.

'ಗ್ರಾಮೀಣ ಭಾಗದಲ್ಲಿ ಅಸ್ಪೃಶ್ಯತೆ ಆಚರಣೆ ಕಂಡುಬಂದರೆ ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸಂಬಂಧಿಸಿದ ಇಲಾಖೆಗೆ ಮಾಹಿತಿ ಕೊಡಿ. ಎಷ್ಟೇ ಪ್ರಭಾವಿಗಳಿದ್ದರೂ ಕಾನೂನಾತ್ಮಕ ಶಿಕ್ಷೆ ಕೊಡಿಸಲು ಬದ್ಧನಾಗಿರುವೆ ಎಂದು ಹೇಳಿದರು.

ಅಂಗನವಾಡಿ ಆಶಾ ಕಾರ್ಯಕರ್ತೆಯರು



ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ನಿರಂತರ ಸೇವೆಗೈಯ್ಯುತ್ತಿದ್ದು, ಅವರ ಗೌರವ ವೇತನ ಹೆಚ್ಚಳಕ್ಕಾಗಿ ಅಧಿವೇಶನದಲ್ಲಿ ಧ್ವನಿಯಾಗುವೆ ಎಂದು ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯ ಕೆ.ಪಿ. ಪಾಲಯ್ಯ ಮಾತನಾಡಿ, ಅಂಬೇಡ್ಕರ್ ಅವರ ಸಂವಿಧಾನ ಜಾರಿಗೊಂಡು 7ದಶಕಗಳು ಗತಿಸಿದರೂ ಅಸ್ಪೃಶ್ಯತೆ ಕುರಿತು ಜಾಗೃತಿ ಮೂಡಿಸುವ ಅಗತ್ಯವಿರುವುದು ಬೇಸರದ ಸಂಗತಿ ಎಂದರು. ತಾ.ಪಂ.ಇಓ ಕೆಂಚಪ್ಪ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಪರಮೇಶ್ವರಪ್ಪ, ಎಸ್.ಟಿ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್, ಬಿಇಓ ಹಾಲಮೂರ್ತಿ, ಪಿಐ ಶ್ರೀನಿವಾಸ್ ರಾವ್, ಪ.ಪಂ ಸದಸ್ಯೆ ನಿರ್ಮಲಕುಮಾರಿ, ವಕೀಲ ಪಂಪಣ್ಣ, ಬಿ. ಮಹೇಶ್ವರಪ್ಪ, ಹಟ್ಟಿ ತಿಪ್ಪೇಸ್ವಾಮಿ, ಸಾಧನ ಕಲಾ ತಂಡದ ಓಬಣ್ಣ, ಲತಾ ಪಟೇಲ್ ಇತರರು ಇದ್ದರು.

# ನಮ್ಮ ಸಾಧನೆಗಳು ಮಾತುಗಳಾಗಬೇಕು

## ರಾಜ್ಯೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ

ದಾವಣಗೆರೆ, ಡಿ.1- ನಾವು ನೀವು ಕನ್ನಡ ನಾಡಿನ ಸತ್ಪ್ರಜೆಗಳು, ಕನ್ನಡ ನಾಡು ನುಡಿಯನ್ನು ಉಳಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಹೇಳಿದರು.

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಕರ್ನಾಟಕ ಮುಕುಟಮಣಿ' ರಾಜ್ಯ ಪ್ರಶಸ್ತಿ ಪ್ರದಾನ, ಹೊಂಗನಸು ಕವನ ಸಂಕಲನ ಲೋಕಾರ್ಪಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಶಸ್ತಿಗಳು ನಿಮ್ಮ ಜವಾಬ್ದಾರಿಯನ್ನು, ಸ್ವಾಭಿಮಾನವನ್ನು ಹೆಚ್ಚಿಸುತ್ತವೆ. ಮಾತುಗಳು ಸಾಧನೆಗಳಾಗಬಾರದು, ಸಾಧನೆಗಳು ಮಾತಾಗಬೇಕು ಎಂದು ಪ್ರಶಸ್ತಿ ಪುರಸ್ಕೃತರಿಗೆ ಕಿವಿ ಮಾತು ಹೇಳಿದರು.

ಮುಂದಿನ ದಿನಗಳಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 87 ವಿವಿಧ ಕ್ಷೇತ್ರಗಳ ಹಿರಿಯ ಸಾಧಕರಿಗೆ



ಸನ್ಮಾನಿಸಲಾಗುವುದು. ಏಕೆಂದರೆ ಅವು ಕಿರಿಯರಿಗೆ ಆದರ್ಶವಾಗುತ್ತವೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಾಗಲಕೋಟೆ ಜಿಲ್ಲೆ ಜಮಖಂಡಿಯ ಯುವ ಸಾಹಿತಿ ಡಾ.ಶ್ರೀದೇವಿ ಸೂರ್ಯಕಾಂತ ಸುವರ್ಣ ಖಂಡಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲಾ ಭಾಷೆಗಳ ಜ್ಞಾನ ಅಗತ್ಯ. ಆದರೆ ತಾಯಿ ಭಾಷೆಯಾದ ಕನ್ನಡವನ್ನು ಮರೆಯಬಾರದು ಎಂದರು.

ಸಾವಿರಾರು ವರ್ಷಗಳ ಇತಿಹಾಸ ಇರುವ ಇಂತಹ ಕನ್ನಡ ನಾಡಿನಲ್ಲಿ ಹುಟ್ಟಿರುವ ನಾವೇ ಪಾವನರು, ಪುಣ್ಯವಂತರು. ಇಂತಹ ಕಾರ್ಯಕ್ರಮಗಳಿಂದ ಕಲೆ, ಸಾಹಿತ್ಯ, ಸಂಸ್ಕೃತಿ, ಉಳಿಯಲಿದೆ ಎಂದರು.

ರಾಯಚೂರಿನ ಬೆಳಕು ಸಾಹಿತ್ಯ, ಶೈಕ್ಷಣಿಕ ಟ್ರಸ್ಟ್ ಸಂಸ್ಥಾಪಕ ಅಣ್ಣಪ್ಪ ಮೇಟಿ ಮಾತನಾಡಿ, ಗಡಿ ಭಾಗಗಳಲ್ಲಿ ಕನ್ನಡ ಮಾಯವಾಗುತ್ತಿದೆ. ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಿವೆ. ಇಂತಹ ದುಸ್ಥಿತಿಗೆ ಬೇರೆ ಯಾರೂ ಕಾರಣರಲ್ಲ. ಬೇರೆ ರಾಜ್ಯದವರಲ್ಲ, ಕನ್ನಡ ಅಳಿಸಿ ಹೋಗುತ್ತಿರುವ ಕಾಲಘಟ್ಟಕ್ಕೆ ಪ್ರಮುಖ ಕಾರಣ ಕನ್ನಡಿಗರೇ ಎಂದರು.

ನಾವು ನಮ್ಮ ಕನ್ನಡ (5ನೇ ಪುಟಕ್ಕೆ)

# ಶಿಕ್ಷಣದಿಂದ ಮಾತ್ರ ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿ ಹೋಗಲಾಡಿಸಲು ಸಾಧ್ಯ



**ಹರಪನಹಳ್ಳಿ ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ರಾಮಗೌಡ ಪಾಟೀಲ್ ಅಭಿಮತ**

ಹರಪನಹಳ್ಳಿ, ಡಿ. 1 - ಸಮಾಜದಲ್ಲಿ ಉದ್ಭವವಾಗಿರುವ ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ವಕೀಲರ ಸಂಘದ ಅಧ್ಯಕ್ಷ ರಾಮಗೌಡ ಪಾಟೀಲ್ ಹೇಳಿದರು.

ತಾಲ್ಲೂಕಿನ ಬಾಗಳಿ ಗ್ರಾಮದಲ್ಲಿ, ತಾಲ್ಲೂಕು ಕಾನೂನು ಸೇವಾ ಸಮಿತಿ ವಕೀಲರ ಸಂಘ, ಬಾಗಳಿ ಗ್ರಾಮದ ರಾಮನಗೌಡ್ರು ಹಾಲಮ್ಮ ಚನ್ನನಗೌಡ ಪ್ರೌಢ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಬಾಲ್ಯ ವಿವಾಹ ಮುಕ್ತ ಭಾರತ ಅಭಿಯಾನ ಕುರಿತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಮಾತನಾಡಿದರು.

18 ವರ್ಷ ದೊಳಗಿನ ಮಕ್ಕಳು ಬಾಲ್ಯವನ್ನು ಹೊಂದಿರುತ್ತಾರೆ, ನಂತರ ವಯಸ್ಕರಾಗುತ್ತಾರೆ. ಮನೆಯಲ್ಲಿ ವಿವಿಧ ಕಾರಣಗಳಿಂದ ಇಂತಹ ಬಾಲ್ಯ ವಿವಾಹಕ್ಕೆ ಪೋಷಕರು ಮುಂದಾಗುತ್ತಾರೆ. ಇದರ ಬಗ್ಗೆ ಅರಿವು ಮೂಡಿಸುವುದಾಗಿದೆ ಎಂದರು. ಬಾಲ್ಯದಲ್ಲಿ ಮದುವೆ ಮಾಡುವುದರಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಳವಣಿಗೆ ಆಗಿರುವುದಿಲ್ಲ.

ದೇಶದಲ್ಲಿ ಹಿಂದಿನಿಂದಲೂ ಅನೇಕ ಅನಿಷ್ಟ ಪದ್ಧತಿಗಳಿದ್ದವು. ಅದರಲ್ಲಿ ಬಾಲ್ಯ ವಿವಾಹವು ಒಂದಾಗಿದೆ. ಈಗಲೂ ಇದು ಅಲ್ಲಿ, ಇಲ್ಲಿ ಕಂಡು ಬರುತ್ತಿದ್ದು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ತಡೆಗಟ್ಟಲು ಮುಂದಾಗಬೇಕು ಎಂದರು.

ಪ್ಯಾನಲ್ ವಕೀಲ ಸಣ್ಣ ನಿಂಗನಗೌಡ ಮಾತನಾಡಿ, ಅನಿಷ್ಟ ಪದ್ಧತಿಯಲ್ಲಿ ಒಂದಾದ ಬಾಲ್ಯ ವಿವಾಹ ಪದ್ಧತಿಯನ್ನು ಹೋಗಲಾಡಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ. ವಿದ್ಯಾರ್ಥಿಗಳು ಪ್ರತಿ ನಿತ್ಯ ಸಮಾಜದಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ಅರಿತು ಕೊಳ್ಳಬೇಕೆಂದರು.

ಪ್ಯಾನಲ್ ವಕೀಲ ಎಂ. ಮೃತ್ಯುಂಜಯ ಇವರು ಬಾಲ್ಯ ವಿವಾಹ ನಿಷೇಧ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಕೇಶವ ಮೂರ್ತಿ ಹೆಚ್.ಎಂ. ಶಿಶು ಸಂರಕ್ಷಣಾಧಿಕಾರಿ ಅಶೋಕ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಬಾಗಳಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಕೆ.ಸುರೇಶ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಕೀಲ ಸಿ.ನಾಗರಾಜನಾಯ್ಕ, ಪಿ. ಕರಿಬಸಪ್ಪ, ಮೇಲ್ವಿಚಾರಕಿ ವಿಜಯಲಕ್ಷ್ಮಿ, ದೈಹಿಕ ಶಿಕ್ಷಕ ಲೋಕೇಶ, ಗ್ರಾ.ಪ. ಅಧ್ಯಕ್ಷೆ ರೇಣುಕಾ, ಕೊಟ್ರೇಶ್ ಸೇರಿದಂತೆ ಶಾಲೆಯ ಸಹ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರು.

# ದೇಶದ ಉನ್ನತಿಗಾಗಿ ಪಡೆದ ಜ್ಞಾನ ಬಳಕೆಯಾಗಲಿ



**ಹರಿಹರ ಶಾಸಕ ಬಿ.ಪಿ. ಹರೀಶ್ ಆಶಯ**

ಹರಿಹರ, ಡಿ. 1 - ಕಾಲೇಜಿನಲ್ಲಿ ಪಡೆದ ಶಿಕ್ಷಣ ಅಂಕ ಗಳಿಕೆಗಷ್ಟೇ ಸೀಮಿತವಾಗದೆ, ದೇಶದ ಉನ್ನತಿಗೆ, ಅಭಿವೃದ್ಧಿಗೆ ಬಳಕೆಯಾಗಲಿ. ಆ ಮೂಲಕ ಉತ್ತಮ ಪ್ರಜೆಗಳಾಗಿ ಬೆಳೆಯಿರಿ ಎಂದು ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಶಾಸಕ ಬಿ.ಪಿ. ಹರೀಶ್ ಅವರು ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆದ 2024-25ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್., ಸ್ಕೌಟ್ ಮತ್ತು ಗೈಡ್ ಹಾಗೂ ರೆಡ್‌ಕ್ರಾಸ್ ಚಟುವಟಿಕೆಗಳ ಉದ್ಘಾಟನೆ ಮತ್ತು ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ, ಹರಿಹರ ದೀವಿಗೆ-4 ವಾರ್ಷಿಕ ಸಂಚಿಕೆಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಸರ್ಕಾರಿ ಕಾಲೇಜುಗಳು ಇಂದು ಖಾಸಗಿ ಕಾಲೇಜುಗಳನ್ನು ಮೀರಿ ಬೆಳೆಯುತ್ತಿವೆ. ಅದರಲ್ಲೂ ಶೈಕ್ಷಣಿಕ ಸಾಧನೆಯಲ್ಲಿ ಸಾಕಷ್ಟು ಉತ್ತಮ ಫಲವನ್ನು ಕಾಣುತ್ತಿವೆ. ಈ ಹಿನ್ನೆಲೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಆದ್ಯತೆಯ ಮೇಲೆ ನೀಡಬೇಕೆಂದು ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಬಾತಿ ಬಸವರಾಜ್ ಅವರು, ಸಮಾಜದಲ್ಲಿ ಕಸ ಸಂಸ್ಕೃತಿ ಹೆಚ್ಚಾಗುತ್ತಿದ್ದು, ಇದು ವಿನಾಶದ ಲಕ್ಷಣವಾಗಿದೆ. ಈ ಬಗ್ಗೆ ಎಚ್ಚರ ವಹಿಸಬೇಕಾಗಿದೆ. ಕನ್ನಡ ಶ್ರಮ-ಸಂಸ್ಕೃತಿಯನ್ನು ಉತ್ತೇಜಿಸುವ ಭಾಷೆಯಾಗಿದೆ. ಕನ್ನಡ ಜೊಳ್ಳಿ ಭಾಷೆಯಲ್ಲ, ಇದು ಸೊಬಗಿನ ಭಾಷೆ. ಕೆರೆಗೆ ಹಾರವಾದ ಭಾಗೀರತಿಯಂತಹ ಉದಾತ್ತ ಮನೋಭಾವದ ಸಂಸ್ಕೃತಿಯ ಭಾಷೆ ಕನ್ನಡವಾಗಿದೆ ಎಂದು ಕನ್ನಡದ ಮತ್ತು ನಾಡಿನ ಹಿರಿಮೆಯನ್ನು ಶ್ಲಾಘಿಸಿದರು.

ದ್ರಾವಿಡರು ಹುಟ್ಟಿದ ದಿನದಿಂದಲೇ ಕನ್ನಡ ಹುಟ್ಟಿಕೊಂಡಿದೆ. ಭಾಷೆಗೆ ಮಿತಿ ಇಲ್ಲ, ಆದರೆ ಕನ್ನಡ ಲಿಪಿಯ ಹುಟ್ಟಿನ ಕಾಲದಿಂದ ಕನ್ನಡ ಭಾಷಾ ಇತಿಹಾಸವನ್ನು ಗುರುತಿಸಲಾಗುತ್ತಿದೆ. ಇಂಗ್ಲಿಷ್ ಎಂಬ ವ್ಯಾಮೋಹದ ಭಾಷೆಯು ಕನ್ನಡ ಭಾಷಾ ಬೆಳವಣಿಗೆಗೆ ಸಹಕಾರಿ. ಅನ್ಯ ಭಾಷೆಯ ಪದಗಳನ್ನು ಎರವಲು ಪಡೆಯುವ ಮೂಲಕ ಭಾಷೆಗೆ ಇನ್ನು ಚಂದದ ಹೊಳಪನ್ನು ನೀಡಬಹುದಾಗಿದೆ ಎಂದು ಕನ್ನಡ ಭಾಷೆಯ ಕುರಿತಾಗಿ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಹೆಚ್. ವಿರುಪಾಕ್ಷಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಧೀಕ್ಷಕ ಆರ್.ಎಂ. ವೀರಭದ್ರಯ್ಯ, ಐ.ಕ್ಯೂ.ಎಸ್.ಸಿ. ಸಂಯೋಜಕ ಡಾ. ಹೆಚ್.ಪಿ. ಅನಂತನಾಗ್, ಸಾಂಸ್ಕೃತಿಕ ವಿಭಾಗದ ಸಂಚಾಲಕ ಡಾ. ಎಂ. ಕುಮಾರ್, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ. ಎಸ್. ಗಂಗರಾಜು, ಕೆ.ಜೆ. ಯೋಗೀಶ್, ಯುವ ರೆಡ್ ಕ್ರಾಸ್‌ನ ಸಂಚಾಲಕ ಡಾ. ಬಿ.ಕೆ. ಮಂಜುನಾಥ, ರೇಂಜರ್ಸ್ ಲೀಡರ್‌ಗಳಾದ ಡಾ. ಜಿ.ಎನ್. ದಾಕ್ಷಾಯಿಣಿ, ಡಾ. ಎಂ.ಎಸ್. ಗೌರಮ್ಮ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಚಂದ್ರಶೇಖರ ಹಾಗೂ ಐ.ಕ್ಯೂ.ಎ.ಸಿ. ಸಹ ಸಂಯೋಜಕ ಅಬ್ದುಲ್ ಬಶೀರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಕು. ಎನ್.ಹೆಚ್. ಅರ್ಪಿತಾ ಪ್ರಾರ್ಥಿಸಿದರು. ಕು. ಅನಿತಾ ಮತ್ತು ಸಂಗಡಿಗರು ನಾಡಗೀತೆ ಪ್ರಸ್ತುತ ಪಡಿಸಿದರು. ಸಮಾಜ ಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್. ತಿಪ್ಪೇಸ್ವಾಮಿ ಸ್ವಾಗತಿಸಿದರು. ಕನ್ನಡ ವಿಭಾಗದ ಅಧ್ಯಾಪಕ ಡಾ. ಎಸ್.ಆರ್. ಮಹಾಂತೇಶ ಅತಿಥಿಗಳ ಪರಿಚಯ ಮಾಡಿದರು. ವಿದ್ಯಾರ್ಥಿನಿ ಕು. ದೀಕ್ಷಿತಾ ಮತ್ತು ಕು. ನಾಗವೇಣಿ ಅವರು ಕಾರ್ಯಕ್ರಮ ನಿರ್ವಹಿಸಿದರು. ಬಿ.ಎಸ್ಸಿ ವಿದ್ಯಾರ್ಥಿನಿ ಕು. ಎಲ್.ಆರ್. ಸಹನ ವಂದಿಸಿದರು.

# ಗೋವಿನಜೋಳ ಒಣಗಿಸುವ ಯಂತ್ರ ಅಳವಡಿಸಲು ವರ್ತಕರ ಮನವಿ



ರಾಣೇಬೆನ್ನೂರು,ಡಿ.1- ಇಲ್ಲಿನ ಎಪಿಎಂಸಿಯಲ್ಲಿ ಗೋವಿನಜೋಳ ಒಣಗಿಸುವ ಯಂತ್ರ ಅಳವಡಿಸಿ ರೈತರಿಗೆ ಆಗುವ ತೊಂದರೆ ಹಾಗೂ ನಷ್ಟ ತಪ್ಪಿಸುವಂತೆ ವರ್ತಕರು ಶಾಸಕ ಪ್ರಕಾಶ ಕೋಳಿವಾಡ ಅವರಿಗೆ ಮನವಿ ಸಲ್ಲಿಸಿದರು.

**ರಾಣೇಬೆನ್ನೂರು**

ರೈತರು ತಮ್ಮ ಅನುಕೂಲದನ್ವಯ ಬೆಳೆ ಕೊಯಲ್ಲಿ ಮಾಡುತ್ತಲೇ ಮಾರಾಟಕ್ಕೆ ಮಾರುಕಟ್ಟೆಗೆ ತರುವುದು ವಾಡಿಕೆ. ಹಸಿ-ಬಿಸಿ ಮಾಲನ್ನು ತರುವ ರೈತರು ಮಾರುಕಟ್ಟೆ ಪ್ರಾಂಗಣದಲ್ಲಿ ಒಣಗಲು ಹಾಕಿದಾಗ ಆಕಸ್ಮಿಕ ಮಳೆಯಿಂದ ರೈತರ ಮಾಲು ಮತ್ತಷ್ಟು ಹಸಿಯಾಗಿ ದರದಲ್ಲಿ ಬಹಳಷ್ಟು ಇಳಿಮುಖವಾಗಿ ರೈತರಿಗೆ ಬಹಳಷ್ಟು ಅನ್ಯಾಯವಾಗಲಿದೆ ಎಂದು ಮನವಿಯಲ್ಲಿ ವರ್ತಕರು ಪ್ರಸ್ತಾಪಿಸಿದ್ದಾರೆ.

ಸರ್ಕಾರದಿಂದ ಇಲಾಖಾ ಕಛೇರಿಯಲ್ಲಿ ಒಣಗಿಸುವ ಯಂತ್ರ ಅಳವಡಿಸಿದರೆ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದು ಮನವಿ ಅರ್ಪಿಸಿದ ವರ್ತಕರ ನಿಯೋಗದಲ್ಲಿ ಜಿ.ಜಿ.ಹೊಟ್ಟಿಗೌಡ್ರ, ಮಾಲತೇಶ ಕರೇಚಿಕ್ಕಪ್ಪನವರ, ವೀರೇಶ ಮೋಟಗಿ, ಮಾಲತೇಶ ಕರ್ಜಗಿ, ಕಿರಣ ಅಂತರವಳ್ಳಿ, ಗುರುರಾಜ ಕಂಬಳಿ, ಪ್ರಕಾಶ ಜಂಬಗಿ, ಸುಧೀರ ಕುರವತ್ತಿ ಮತ್ತಿತರರಿದ್ದರು.

# ನಾಳೆ ವಿಶ್ವ ವಿಕಲಚೇತನರ ದಿನಾಚರಣೆ

ದಾವಣಗೆರೆ, ಡಿ.1- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 3ರ ಮಂಗಳವಾರ ಬೆಳಗ್ಗೆ 11ಕ್ಕೆ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

# ವಜ್ರೇಶ್ವರಿ ಸಂಸ್ಥೆಯಿಂದ ಎಸ್‌ಎಲ್‌ಎನ್ ಕಾನ್ವೆಂಟ್‌ನಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ಡಿ.. 1- ಶ್ರೀ ವಜ್ರೇಶ್ವರಿ ಮಹಿಳಾ ಸಂಸ್ಥೆ ವತಿಯಿಂದ ಎಸ್‌ಎಲ್‌ಎನ್ ಕಾನ್ವೆಂಟ್‌ನಲ್ಲಿ ಗಾಂಧಿ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಆಚರಿಸಲಾಯಿತು.

ಬೆಸ್ಕಾಂನ ಇಬ್ಬರು ಲೈನ್ ಮ್ಯಾನ್‌ಗಳಾದ ವಿ. ಪ್ರಕಾಶ್ ಹಾಗೂ ಕಾಳಾಚಾರಿ ಇವರಿಗೆ ಈ ಸಂದರ್ಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ತಿಕ್, ಧೃತಿ ಚೇತನ, ಪ್ರತೀಕ್ಷಾ, ಕಬೀರ್, ಗ್ರೀಷ್ಮ, ಯೋಗೇಶ್ ಹಾಗೂ ಕಾನ್ವೆಂಟ್‌ನ ಉಪಾಧ್ಯಾಯರಾದ ಸುಜಾತ ನಾಗೇಶ್ ಅವರಿಗೂ ಈ ಸಂದರ್ಭದಲ್ಲಿ ಗೌರವಿಸಲಾಯಿತು.

ವಿಜಯ ಅಕ್ಕಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಂದ್ರಿಕಾ ವೇಣುಗೋಪಾಲ್ ಕಾರ್ಯಕ್ರಮ ನಿರೂಪಿಸಿದರು. ವಜ್ರೇಶ್ವರಿ ಮಹಿಳಾ ಸಂಸ್ಥೆಯ ಸದಸ್ಯರುಗಳು, ಸಾವಿತ್ರ, ಚಂದ್ರಿಕ, ಜಗನ್ನಾಥ್, ಗಿರಿಜಾ, ಬಿಲ್ಲಳ್ಳಿ ಸಾವಿತ್ರಿ, ನೆಸ್ವಿ ಸುಧಾ, ಸಂತೋಷ್, ಮಮತಾ, ಕೊಟ್ರೇಶ್, ಮೀನಾಕ್ಷಿ, ಪ್ರೇಮಾ ಸೋಮಶೇಖರ್, ಚಂದ್ರಮ್ಮ ಮತ್ತು ಪ್ರೇಮಾ, ಸುಶ್ಮಿತಾ ಶಿಕ್ಷಕಿ ಭಾಗ್ಯಲಕ್ಷ್ಮಿ, ಕಾವ್ಯ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕೊಲೆ : ಅಪರಾಧಿಗೆ 6 ವರ್ಷ ಶಿಕ್ಷೆ

ದಾವಣಗೆರೆ, ಡಿ.1- ಕೆಲಸದ ವಿಚಾರಕ್ಕೆ ಜೊತೆಗಾರನನ್ನು ಕೊಲೆ ಮಾಡಿದ ಅಪರಾಧಿಗೆ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 6 ವರ್ಷ ಸಾದಾ ಶಿಕ್ಷೆ ಹಾಗೂ 10 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ಬೆಂಗಳೂರು ದೊಡ್ಡ ಬೆಟ್ಟಹಳ್ಳಿಯ ಹನುಮಂತಪ್ಪ (60) ಶಿಕ್ಷೆಗೆ ಗುರಿಯಾದ ಅಪರಾಧಿ. ಬಾಬು (ಬಾಷಾ) ಕೊಲೆಯಾದವರು.

ಬಾಬು ಹಾಗೂ ಹನುಮಂತಪ್ಪ ಹೊನ್ನಾಳಿಗೆ ಗಾರೆ ಕೆಲಸಕ್ಕೆ ಬಂದಿದ್ದರು. ಬಾಬು ಅವರು ಹನುಮಂತಪ್ಪ ಅವರನ್ನು ಗಾರೆ ಕೆಲಸದ ವಿಚಾರವಾಗಿ ಆಗಾಗ ನಿಂದಿಸುತ್ತಿದ್ದರು. ಇದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದು 2022ರ ಡಿಸೆಂಬರ್ 10ರಂದು ಹನುಮಂತಪ್ಪ ಬಾಬು ಅವರಿಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದ.

ಈ ಸಂಬಂಧ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಹೊನ್ನಾಳಿ ಪೊಲೀಸ್ ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಸಿದ್ದೇಗೌಡ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಪ್ರವೀಣಕುಮಾರ್ ಆರ್.ಎನ್. ಅಪರಾಧಿಗೆ ಶಿಕ್ಷೆ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕ ಕೆ.ಜಿ. ಜಯಪ್ಪ ಅವರು ವಾದ ಮಂಡಿಸಿದ್ದರು.

# ಎಂ. ಮಹೇಶ್ವರಯ್ಯ ಅವರಿಗೆ ಪ್ರಶಸ್ತಿ



ದಾವಣಗೆರೆ, ಡಿ.1- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಏರ್ಪಡಿಸಿದ್ದ 69 ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮೂಲತಃ ಗಂಗನರಸಿ ಗ್ರಾಮದವರಾದ ಸ್ಥಳೀಯ ಸ್ಪ್ರಾಂಗ್ ಮ್ಯಾನ್ ಏಷ್ಯಾ, ಅಂತರರಾಷ್ಟ್ರೀಯ ಪವರ್ ಲಿಫ್ಟರ್ ಎಂ. ಮಹೇಶ್ವರಯ್ಯ ಅವರು 'ಕರ್ನಾಟಕ ಮುಕುಟಮಣಿ' ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿ ಪ್ರಶಸ್ತಿ ಸ್ವೀಕರಿಸಿದರು.

# ಸೂರ್ಯನ ಸುಡುವ ಪದರ ಅಧ್ಯಯನಕ್ಕೆ ಯುರೋಪ್‌ನ ಪ್ರೋಬಾ-3ಗೆ ಸಜ್ಜಾದ ಇಸ್ರೋ

ಬೆಂಗಳೂರು, ಡಿ.1- ಯುರೋಪ್ ಬಾಹ್ಯಾಕಾಶ ಸಂಸ್ಥೆಯ (ಇಎಸ್‌ಎ) ಮಹತ್ತರವಾದ ಮಿಷನ್ ಉಡಾವಣೆ ಮಾಡಲು ಭಾರತದ ಇಸ್ರೋ ಸಜ್ಜಾಗಿದೆ. ಸೂರ್ಯನ ಅಧ್ಯಯನಕ್ಕಾಗಿ 'ಪ್ರೋಬಾ-3' ಹೆಸರಿನ ಗಗನನೌಕೆಯನ್ನು ಹಾರಿಬಿಡಲಾಗುತ್ತಿದೆ. ಇದೇ ದಿನಾಂಕ 4ರಂದು ಬುಧವಾರ ಸಂಜೆ 4.08ಕ್ಕೆ ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಉಡಾವಣೆ ನಿಗದಿಯಾಗಿದೆ. ಇದು ಸೂರ್ಯನ ಸುಡುವ ಪದರದ ಅಧ್ಯಯನ ಮಾಡುತ್ತದೆ.

# ಹುಬ್ಬಳ್ಳಿ-ಧಾರವಾಡದಲ್ಲಿ ಮನುಷ್ಯರಂತೆ ಪ್ರಾಣಿಗಳಿಗೂ ಅಂತ್ಯಕ್ರಿಯೆ ವ್ಯವಸ್ಥೆ

ಹುಬ್ಬಳ್ಳಿ, ಡಿ.1- ಮನುಷ್ಯರ ಶವ ಸಂಸ್ಕಾರದಂತೆಯೇ ಪ್ರಾಣಿಗಳ ಅಂತ್ಯಕ್ರಿಯೆ ನಡೆಸಲು ರಾಜ್ಯದಲ್ಲಿಯೇ ಪ್ರಥಮವಾಗಿ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆ ಪ್ರಾಣಿಗಳ ಅಂತ್ಯಕ್ರಿಯಾ ಘಟಕಗಳನ್ನು ಸ್ಥಾಪಿಸಿದೆ.



ಪ್ರಾಯೋಗಿಕ ಹಂತ ಮಾತ್ರ ಬಾಕಿ ಉಳಿದುಕೊಂಡಿದೆ. ಮುಂದಿನ ದಿನಗಳಲ್ಲಿ ಸತ್ತ ಪ್ರಾಣಿಗಳ ದಹನವೂ (ಸುಡುವುದು) ಆಗಲಿದೆ. ಇದಕ್ಕಾಗಿ ಹು-ಧಾ ಮಹಾನಗರಪಾಲಿಕೆ ಸಿದ್ಧತೆ ಮಾಡಿಕೊಂಡಿದ್ದು, ಈಗಾಗಲೇ ಎರಡು ಘಟಕಗಳ ಕಾಮಗಾರಿ ಮುಗಿಸಿದೆ. ಒಟ್ಟು 1.6 ಕೋಟಿ ರೂ. ಖರ್ಚಾಗಿದೆ. 15ನೇ ಹಣಕಾಸು ಆಯೋಗದಡಿ ಅನುದಾನವನ್ನು ಮಹಾನಗರಪಾಲಿಕೆ ಬಿಡುಗಡೆಗೊಳಿಸಿದೆ.

ಹುಬ್ಬಳ್ಳಿಯ ಕಾರವಾರ ರಸ್ತೆಯ ತ್ಯಾಜ್ಯ ಸಂಸ್ಕರಣಾ ಘಟಕ ಹಾಗೂ ಧಾರವಾಡ ಹೊಸಯಲ್ಲಾಪುರ ಬಳಿಯ ತ್ಯಾಜ್ಯ ಸಂಸ್ಕರಣಾ ಘಟಕದ ಬಳಿ ಪ್ರಾಣಿಗಳ ದಹನ ಘಟಕ ತೆರೆಯಲಾಗಿದೆ.

ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಸಾಕು ಪ್ರಾಣಿಗಳನ್ನು ಹೂಳಲು ಅಥವಾ ಸುಡಲು ನಿಗದಿತ ಸ್ಥಳ ಇರಲಿಲ್ಲ. ಮೃತ ಪ್ರಾಣಿಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದರು. ಇದರಿಂದ ಕೊಳತೆ ವಾಸನೆಯಿಂದಾಗಿ ಸಾರ್ವಜನಿಕರು ಕಿರಿಕಿರಿ ಅನುಭವಿಸುತ್ತಿದ್ದರು. ಸಾಕು ಪ್ರಾಣಿ ಮಾಲೀಕರಿಗೆ ಎರಡು ಆಯ್ಕೆಗಳಿದ್ದವು. ತಮ್ಮ ಸಾಕು ಪ್ರಾಣಿಗಳನ್ನು ತಮ್ಮ ಹಿತ್ತಲಿನಲ್ಲಿ ಹೂತು ಹಾಕುವುದು ಅಥವಾ ಪಾಲಿಕೆ ವಾಹನಗಳಿಗೆ ಹಸ್ತಾಂತರ ಮಾಡುತ್ತಿದ್ದರು. ಆದರೀಗ, ಸಾಕಷ್ಟು ಜನರು ಮಹಾನಗರಪಾಲಿಕೆ ನಿಯಂತ್ರಣಾ ಕೊಠಡಿಗೆ ಕರೆ ಮಾಡುತ್ತಿದ್ದು, ಸಾಕು ಪ್ರಾಣಿಗಳ ಸ್ಮಶಾನ ಘಟಕ ಸ್ಥಾಪಿಸಲು ಒತ್ತಾಯ ಕೇಳಿಬಂದಿದ್ದವು.

ದೂರುಗಳ ಆಧಾರದ ಮೇಲೆ ಕ್ಯಾಟ್ ವೆಹಿಕಲ್‌ಗಳು ಸತ್ತ ಪ್ರಾಣಿಗಳನ್ನು ತ್ಯಾಜ್ಯ ಘಟಕಗಳಲ್ಲಿ ಅಂತ್ಯಕ್ರಿಯೆ ನಡೆಸಲಾಗುತ್ತಿತ್ತು. ಅದು ವೈಜ್ಞಾನಿಕವಾಗಿರಲಿಲ್ಲ. ಮಹಾನಗರಪಾಲಿಕೆ ವೈಜ್ಞಾನಿಕವಾಗಿ ಪ್ರಾಣಿಗಳನ್ನು ವಅಂತ್ಯಕ್ರಿಯೆ ಮಾಡುವುದರ ಜೊತೆಗೆ ಪ್ರಾಣಿಗಳೂ ಕೂಡ ಮನುಷ್ಯರಂತೆ ಎಂಬ ಭಾವನೆಯಿಂದ ಪ್ರಾಣಿಗಳ ದಹನ ಘಟಕ ಸ್ಥಾಪಿಸುತ್ತಿದೆ.

ಈ ಕುರಿತು ಮಾಹಿತಿ ನೀಡಿದ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಕಾರ್ಯಪಾಲಕ ಇಂಜಿನಿಯರ್ ಆರ್. ವಿಜಯಕುಮಾರ್, ಪ್ರಾಣಿಗಳನ್ನು ಗೌರವಯುತವಾಗಿ ಅಂತ್ಯಸಂಸ್ಕಾರ ಮಾಡುವ ಉದ್ದೇಶದಿಂದ ಎರಡು ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ. ಪ್ರಾಣಿಗಳು ಸತ್ತ ಕೂಡಲೇ ಸಹಾಯವಾಣಿಗೆ ಕರೆ ಮಾಡಿದರೆ, ಪಾಲಿಕೆ ಸಿಬ್ಬಂದಿ ಸತ್ತ ಪ್ರಾಣಿಗಳಿಗೆ ಗೌರವಯುತವಾಗಿ ಅಂತ್ಯಕ್ರಿಯೆ ಮಾಡುತ್ತಾರೆ. ಸಾರ್ವಜನಿಕರು ಕೂಡ ತಾವೇ ಬಂದು ಅಂತ್ಯಕ್ರಿಯೆ ಮಾಡಬಹುದು ಎಂದು ಹೇಳಿದರು.

ಒಂದು ತಾಸಿಗೆ 80-100 ಕೆಜಿ ತೂಕದ ಪ್ರಾಣಿಗಳನ್ನು ಇದರಲ್ಲಿ ದಹನ ಮಾಡಬಹುದು. ದಹನ ಯಂತ್ರಕ್ಕೆ ಸಂಬಂಧಿಸಿದಂತೆ ಸಿವಿಲ್ ಕಾಮಗಾರಿ ಮುಗಿದಿದೆ. ಇನ್ನಷ್ಟು ತಾಂತ್ರಿಕ ಕಾಮಗಾರಿಗಳು ಬಾಕಿ ಉಳಿದಿವೆ. ಸದ್ಯಕ್ಕೆ ಸ್ಪಾರ್ಕ್ ಹಾಗೂ ಕೆಲ ಸಾಮಗ್ರಿಗಳ ಜೋಡಣೆ ಉಳಿದುಕೊಂಡಿದೆ. ವಾಣಿಜ್ಯ ಬಳಕೆಯ ಸಿಲಿಂಡರ್ ಸಂಪರ್ಕ ಕಲ್ಪಿಸುವ ಪ್ರಕ್ರಿಯೆ ನಡೆಯುತ್ತಿದೆ. 30 ಮೀಟರ್ ಎತ್ತರದ ಚಿಮಣಿ ನಿರ್ಮಿಸಿದ್ದು, ಯಾವುದೇ ಮಾಲಿನ್ಯ ಉಂಟಾಗದಂತೆ ತಡೆಯಲಿದೆ ಎಂದರು.

ಈ ಹಿಂದಿನ ಅಂಕಿ-ಅಂಶಗಳ ಪ್ರಕಾರ ಪ್ರತಿ ತಿಂಗಳ 250-300 ದೂರುಗಳು ಸಹಾಯವಾಣಿಗೆ ಬರುತ್ತಿವೆ. ಸಣ್ಣ ಹೆಗ್ಗಣದಿಂದ ಹಿಡಿದು ದನಕರುಗಳವರೆಗೆ ದೂರುಗಳು ಬರುತ್ತವೆ.

ಯಥಾಪ್ರಕಾರ ದೂರುಗಳ ಆಧಾರದ ಮೇಲೆ ಸತ್ತ ಪ್ರಾಣಿಗಳನ್ನು ವಾಹನಗಳ ಮೂಲಕ ಸಾಗಿಸಿ ತ್ಯಾಜ್ಯ ಘಟಕಗಳಲ್ಲಿ ಹೂಳಲಾಗುತ್ತಿತ್ತು. ಈಗ ಎರಡು ಘಟಕಗಳು ಸಿದ್ಧವಾಗಿದ್ದು, ಕಾರ್ಯಚರಣೆ ಹಂತಕ್ಕೆ ಬಂದಿದ್ದು ವೈಜ್ಞಾನಿಕವಾಗಿ ಅಂತ್ಯಕ್ರಿಯೆ ಮಾಡಲಾಗುವುದು. ಸ್ಪಾರ್ಕ್ ಮತ್ತು ಪುಣೆಯಿಂದ ಬರುವ ಕೆಲ ಉಪಕರಣಗಳ ಜೋಡಣೆ ಮಾತ್ರ ಬಾಕಿ ಇದೆ.

# ಕಾಂಗ್ರೆಸ್ ನಾಯಕರ ಒಗ್ಗಟ್ಟಿನ ಪ್ರಯತ್ನದಿಂದ ಗೆಲುವು : ಘನಿ ತಾಹೇರ್



ದಾವಣಗೆರೆ, ಡಿ. 1 - ರಾಜ್ಯದಲ್ಲಿ ಈಚೆಗೆ ನಡೆದ ಉಪಚುನಾವಣೆಯಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿರುವುದು ಕಾಂಗ್ರೆಸ್ ಪಕ್ಷದ ಒಗ್ಗಟ್ಟಿನ ಪ್ರಯತ್ನ ಮತ್ತು ಅಹಿಂದ ವರ್ಗದ ಮತಗಳು ವಿಭಜನೆಯಾಗದಂತೆ ನೋಡಿಕೊಂಡಿರುವುದರ ಪ್ರತಿಫಲ ಎಂದು ಕರ್ನಾಟಕ ರಾಜ್ಯ ವಕ್ಫ್ ಪರಿಷತ್ ಸದಸ್ಯ ಘನಿ ತಾಹೀರ್ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜ್ಯದ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಪ್ರಜ್ಞಾವಂತ ಮತದಾರರು ಗೆಲ್ಲಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಮತ್ತು ಮುಖ್ಯಮಂತ್ರಿಗಳು ಜಾರಿಗೆ ತಂದಿರುವ ಗ್ಯಾರಂಟಿಗಳ ಯೋಜನೆಗೆ ರಾಜ್ಯ ಮತದಾರರು ಮನ್ನಣೆ ನೀಡಿದ್ದಾರೆ. ಈ ಉಪ ಚುನಾವಣೆಯಲ್ಲಿ ಅಹಿಂದ ಮತದಾರರು ಪಕ್ಷಕ್ಕೆ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

**ಭಾವಪೂರ್ಣ ಶ್ರದ್ಧಾಂಜಲಿ**



ಬಾಪೂಜಿ ವಿದ್ಯಾಸಂಸ್ಥೆ, ಅಧ್ಯಕ್ಷರು ಹಾಗೂ ಆರ್ಯವೈಶ್ಯ ಮಹಾಜನ ಸಮಿತಿ ಉಪಾಧ್ಯಕ್ಷರಾದ

**ಶ್ರೀ ರಾಜನಹಳ್ಳಿ ರಮಾನಂದ್**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಆ ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಎಸ್.ಟಿ. ಕುಸುಮಶ್ರೇಷ್ಠಿ ಮತ್ತು ಮಕ್ಕಳು, ದಾವಣಗೆರೆ**

**ಯೋಗ ಗುರು ಡಾ. ರಾಘವೇಂದ್ರ ಗುರೂಜಿಯವರಿಗೆ ಪಿತೃ ವಿಯೋಗ**



ದಾವಣಗೆರೆ #189 ಸಿ ಹಂತ, 3 ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, ದೇವರಾಜ್ ಅರಸು ಬಡಾವಣೆ ವಾಸಿ ಯೋಗ ಗುರು ಡಾ. ರಾಘವೇಂದ್ರ ಗುರೂಜಿ ಇವರ ತಂದೆ ಹೋಟೆಲ್ ಉದ್ಯಮಿ ಪೂಜ್ಯ ಕೆ. ಮಹಾಬಲ ರಾವ್ (96) ಇವರು ದಿನಾಂಕ 1.12.2024ರ ಭಾನುವಾರ ಮಧ್ಯಾಹ್ನ 1.30 ಕ್ಕೆ ನಿಧನರಾಗಿರುತ್ತಾರೆ. ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಮತ್ತು ಮರಿಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಇವರ ಅಂತ್ಯಕ್ರಿಯೆಯು ದಿನಾಂಕ 2.12.2024ರ ಸೋಮವಾರ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ಬೆಳಿಗ್ಗೆ 9 ಗಂಟೆಗೆ ನೆರವೇರುವುದು.

**ಕಾಡು ಬೆಳೆಸಿ ನಾಡು ಉಳಿಸಿ**

# ಚನ್ನಗಿರಿ ತಾಲ್ಲೂಕು ಕಸಾಪ ಸೇವೆಗೆ ಶಾಸಕರ ಶ್ಲ್ಯಾಘನೆ

ಚನ್ನಗಿರಿ, ಡಿ.1- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಶಾಲಾ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಇಡೀ ನವೆಂಬರ್ ತಿಂಗಳಿನಲ್ಲಿ ತಾಲ್ಲೂಕಿನ ಆಯ್ದ 18 ಪ್ರೌಢ ಶಾಲೆಗಳಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು 'ಶಾಲಾ ಅಂಗಳದಲ್ಲಿ ನುಡಿ ತೋರಣ' ಎಂಬ ವಿಷಯಾಧಾರಿತವಾದ ವಿನೂತನ ಕಾರ್ಯಕ್ರಮವನ್ನು ಸಂಘಟಿಸಿ ಯಶಸ್ವಿಗೊಳಿಸಿರುವುದು ಶ್ಲಾಘನೀಯ ಎಂದು ಶಾಸಕ ಬಸವರಾಜು ವಿ. ಶಿವಗಂಗಾ ತಿಳಿಸಿದರು.



ಅವರು ಚನ್ನಗಿರಿ ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ನುಡಿ ತೋರಣ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಒಂದೇ ನಾಣ್ಯದ ಎರಡು ಮುಖಗಳಂತಿರುವ ಕನ್ನಡ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಸಮಾಜ ವನ್ನು ಸರಿದಾರಿಗೆ ಕೊಂಡೊಯ್ಯುವ ಮುಖವಾಣಿ ಗಳಿದ್ದಂತೆ. ಕ್ಷೇತ್ರದ ಪ್ರಗತಿಯ ಆದ್ಯತೆಯ ವಲಯಗಳಲ್ಲಿ ಇವೆರಡಕ್ಕೂ ಪ್ರಥಮ ಪ್ರಾಶಸ್ತ್ಯ ನೀಡಲಾಗುವುದು. ತಾ|| ಕಸಾಪ ಘಟಕದಿಂದ ಸಂತೆಬೆನ್ನೂರು ಗ್ರಾಮದಲ್ಲಿ ಆಯೋಜಿಸಲು ಉದ್ದೇಶಿಸಿರುವ ಚನ್ನಗಿರಿ ತಾಲ್ಲೂಕು 17 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಶಾಸಕರು ತಿಳಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ಮಾತನಾಡಿ, ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 25 ಕೋಟಿ ರೂ.ಗಳನ್ನು ನೀಡುವುದರ ಜೊತೆಗೆ ಬೆಳಗಾವಿಯ ಚಳಿಗಾಲದ ಅಧಿವೇಶನದ ಅವಧಿಯನ್ನು ಸಮ್ಮೇಳನದ ದೃಷ್ಟಿಯಿಂದ ಒಂದು ದಿನ ಮೊಟಕುಗೊಳಿಸಿದ ಸರ್ಕಾರದ ನಡೆಯು ಕನ್ನಡದ ಸಾರಸ್ವತ ಲೋಕದ ಮೇಲಿನ ಕಾಳಜಿಯನ್ನು ತೋರಿಸುತ್ತದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಲ್.ಜಯಪ್ಪ ಮಾತನಾಡಿ, ಶಾಲಾ ಮಕ್ಕಳಲ್ಲಿ ನಾಡು ನುಡಿಯ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ಅವರ ಶೈಕ್ಷಣಿಕ ವಿಕಾಸಕ್ಕೆ ಪೂರಕವಾಗುವ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ ಇಲಾಖೆಯ ಸಂಪೂರ್ಣ ಸಹಕಾರವಿರುತ್ತದೆ ಎಂದರು. ಸಂತೆಬೆನ್ನೂರು ಮಾರುತಿ ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿ ಪುರಸಭೆ ಸದಸ್ಯ ಶ್ರೀಕಾಂತ್, ಎಸ್‌ಡಿಎಂಸಿ ಅಧ್ಯಕ್ಷ ಹೆಚ್.ಸಿ. ವೆಂಕಟೇಶ್, ಬಿಆರ್‌ಸಿ ಡಾ. ಎಸ್. ಶಂಕರಪ್ಪ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಬಿ.ಜಿ. ಸದಾಶಿವಪ್ಪ, ಮುಖ್ಯಶಿಕ್ಷಕ ಹೆಚ್.ಎಂ. ಬಸವರಾಜಪ್ಪ, ತಾ.ಸರ್ಕಾರಿ ನೌಕರರ ಸಂಘದ ಬಿ.ಎಸ್.ಗಣೇಶ್, ನಾಗರಾಜ್, ಶಾಕೀರ್ ಅಹಮದ್, ಪ್ರೌಢಶಾಲೆ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಪಿ.ವಿ.ಸ್ವಾಮಿ, ಸಹಶಿಕ್ಷಕರ ಸಂಘದ ಅಧ್ಯಕ್ಷ ಜಯಪ್ರಕಾಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಸಿ.ಗುರುಮೂರ್ತಿ, ಕನ್ನಡ ಭಾಷಾ ಶಿಕ್ಷಕರ ಬಳಗದ ಅಧ್ಯಕ್ಷ ಶಿವಕುಮಾರಸ್ವಾಮಿ, ಸಂಚಾಲಕ ನಾಗೇಶನಾಯ್ಕ್ ಮತ್ತಿತರರು ಇದ್ದರು.

## ಬೀದಿಬದಿ ವ್ಯಾಪಾರಸ್ಥರ ಅಭಿವೃದ್ಧಿಗೆ ಪಿಎಂ ನಿಧಿ ಯೋಜನೆಯ ಪಖ್ವಾಡ ಶಿಬಿರ

ದಾವಣಗೆರೆ, ಡಿ.1- ಬೀದಿಬದಿ ವ್ಯಾಪಾರಸ್ಥರ ಸರ್ವತೋಮುಖ ಅಭ್ಯುದಯಕ್ಕಾಗಿ ಕೇಂದ್ರ ಪುರಸ್ಕೃತ ಪಿಎಂ-ನಿಧಿ ಈ ಯೋಜನೆಯ ವೇಗವನ್ನು ಹೆಚ್ಚಿಸಲು ನವೆಂಬರ್ 18 ರಿಂದ ಡಿಸೆಂಬರ್ 2ರವರೆಗೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪಖ್ವಾಡ ಶಿಬಿರಗಳನ್ನು ವಿವಿಧ ಬ್ಯಾಂಕುಗಳ ಶಾಖೆಗಳಲ್ಲಿ ಆಯೋಜಿಸಲಾಗಿದೆ. ಆಸಕ್ತ ಬೀದಿಬದಿ ವ್ಯಾಪಾರಸ್ಥರು ಕಿರು ಸಾಲ ಸೌಲಭ್ಯ ಒದಗಿಸಲು ಅರ್ಜಿ ಸಲ್ಲಿಸಬಹುದು. ಸಾಲ ಮಂಜೂರಾತಿ ಪಡೆಯುವುದು, ಸಾಲ ವಿತರಣೆ ಪಡೆಯುವುದು, ಡಿಜಿಟಲ್ ವಹಿವಾಟು ಪಾವತಿ ನಡೆಸುವುದು ಮತ್ತು ಸಾಮಾಜಿಕ ಭದ್ರತಾ ವಿಮಾ ಯೋಜನೆಗಳ ಅನುಕೂಲ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬೇಕೆಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

## ಮಕ್ಕಳನ್ನು ಪಡೆಯಲು ಅರ್ಜಿ ಆಹ್ವಾನ

ದಾವಣಗೆರೆ, ಡಿ. 1 - ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಂಗ ಸಂಸ್ಥೆಗಳಾದ ಬಾಲಕರ ಸರ್ಕಾರಿ ಬಾಲ ಮಂದಿರ, ಬಾಲಕಿಯರ ಸರ್ಕಾರಿ ಬಾಲ ಮಂದಿರ ಹಾಗೂ ಅನುದಾನ ಸಹಿತ, ರಹಿತ, ಸರ್ಕಾರಿ, ಖಾಸಗಿ ಮಕ್ಕಳ ಪಾಲನಾ ಕೇಂದ್ರಗಳಲ್ಲಿ ದೀರ್ಘಕಾಲಗಳಿಂದ ಪೋಷಕರ, ಕುಟುಂಬದ ಆರೈಕೆಯಿಂದ ವಂಚನೆಗೆ ಒಳಗಾದ 6 ರಿಂದ 18 ವರ್ಷದ ಒಳಗಿನ ಹೆಣ್ಣು ಹಾಗೂ ಗಂಡು ಮಕ್ಕಳಿಗೆ ತಾತ್ಕಾಲಿಕವಾದ, ಶಾಶ್ವತವಾದ ಪರ್ಯಾಯ ಕೌಟುಂಬಿಕ ವ್ಯವಸ್ಥೆಯನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಢವಾಗಿರುವ ಕುಟುಂಬದ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಬಾಲ ಭವನ ಕಟ್ಟಡ ಜಿ.ಹೆಚ್ ಪಟೇಲ್ ಬಡಾವಣೆ, ನಾಗನೂರ ರಸ್ತೆ, ದಾವಣಗೆರೆ ದೂ. ಸಂ: 08192-222701 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

# ರೋಗಿಯ ಸಮಾಧಾನಕರ ಜೀವನಕ್ಕೆ ಪ್ಯಾಲಿಯೇಟಿವ್ ಕೇರ್ ಸಹಾಯಕ



ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದ ಉಪನ್ಯಾಸದಲ್ಲಿ ಪ್ರಾಧ್ಯಾಪಕರಾದ ಡಾ.ಎ.ಎಂ. ಶಿಲ್ಪಶ್ರೀ

ದಾವಣಗೆರೆ, ಡಿ.1- ದೀರ್ಘಕಾಲದ ಕಾಯಿಲೆಯಿಂದ ಬಳಲುವವರು, ಪ್ಯಾಲಿಯೇಟಿವ್ ಕೇರ್‌ನಿಂದ ರೋಗದ ನೋವು, ಸಂಕಟವನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ಜ.ಜ.ಮು ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕಿ ಡಾ.ಎ.ಎಂ. ಶಿಲ್ಪಶ್ರೀ ತಿಳಿಸಿದರು.

ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಡಿ ನಗರದ ಬಾಪೂಜಿ ಮಕ್ಕಳ ಆಸ್ಪತ್ರೆಯ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಪ್ಯಾಲಿಯೇಟಿವ್ ಕೇರ್-ಉಪಶಮನಕಾರಿ ಆರೈಕೆ' ಎಂಬ ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ತೀವ್ರ ಕ್ಯಾನ್ಸರ್, ಹೃದಯ ಸಂಬಂಧಿ ರೋಗಗಳು ಅಥವಾ ಶ್ವಾಸಕೋಶದ ಸಮಸ್ಯೆಗಳಿಂದಾಗಿ ರೋಗಿಯು ನೋವು ಮತ್ತು ತೊಂದರೆ ಅನುಭವಿಸುತ್ತಿರುವವರು ಔಷಧಿ ಮತ್ತು ಚಿಕಿತ್ಸೆಯ ಮೂಲಕ ನೋವನ್ನು ಕಡಿಮೆಗೊಳಿಸುವುದು ಪ್ಯಾಲಿಯೇಟಿವ್ ಕೇರ್‌ನ ಪ್ರಮುಖ ಕಾರ್ಯವಾಗಿದೆ ಎಂದು ಹೇಳಿದರು.

ಇದು ಕೇವಲ ರೋಗದ ನಿರೋಧನೆಯಲ್ಲ, ಶಾರೀರಿಕ, ಮಾನಸಿಕ, ಸಾಮಾಜಿಕ ಮತ್ತು ಅಧ್ಯಾತ್ಮಿಕ ಬೆಂಬಲವನ್ನು ಒದಗಿಸುವ ಉದ್ದೇಶವನ್ನು ಪ್ಯಾಲಿಯೇಟಿವ್ ಕೇರ್ ಹೊಂದಿದೆ ಎಂದು ತಿಳಿಸಿದರು.

ರೋಗಿಯ ತೊಂದರೆಗಳನ್ನು ಕಡಿಮೆ ಮಾಡುವ ಮೂಲಕ ಅವರು ಶಾಂತ ಮತ್ತು ಸಮಾಧಾನಕರ ಜೀವನ ನಡೆಸಲು ಸಹಾಯ ಮಾಡುವುದಲ್ಲದೆ, ದಿನನಿತ್ಯದ ಚಟುವಟಿಕೆಗಳಲ್ಲಿ ಭಾಗವಹಿಸಲು ಶಕ್ತಿಗೊಳಿಸಲಿದೆ ಎಂದು ಹೇಳಿದರು.

ಪಾರ್ಕಿನ್ಸನ್ಸ್ ಡಿಮೆನ್ಷಿಯಾ, ಹೃದಯ ಅಸಮರ್ಥತೆ, ಮತ್ತು ಡಯಾಬಿಟೀಸ್ ಹೀಗೆ ದೀರ್ಘಕಾಲದ ಕಾಯಿಲೆಗಳಲ್ಲಿಯೂ ಈ ಆರೈಕೆಯ ಅಗತ್ಯವಿದ್ದು, ರೋಗಿಯು ಬದುಕಿನ ತಿರುವುಗಳನ್ನು ಮತ್ತು ಮರಣದ ಭಯವನ್ನು ಎದುರಿಸಲು ಬೆಂಬಲ ನೀಡಲಿದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕರಲ್ಲಿ ಅರಿವಿನ ಕೊರತೆಯಿಂದಾಗಿ ಈ ಸೇವೆ ಎಲ್ಲರಿಗೂ ತಲುಪುತ್ತಿಲ್ಲ.

ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಇದಕ್ಕೆ ಕಡಿಮೆ ಆದ್ಯತೆಯಿದ್ದು, ಗ್ರಾಮೀಣ ಪ್ರದೇಶಗಳಲ್ಲೂ ಈ ಸೇವೆಗಳ ಅಭಾವವಿದೆ ಎಂದರು.

ಪ್ಯಾಲಿಯೇಟಿವ್ ಕೇರ್ ಸೇವೆಗಳು ಆರೋಗ್ಯ ಸೇವಾ ವ್ಯವಸ್ಥೆಯ ಅತ್ಯವಶ್ಯಕ ಅಂಗವಾಗಬೇಕು. ಸಾರ್ವಜನಿಕರಿಗೆ ಇದರ ಮಹತ್ವ ತಿಳಿಸಲು ಜಾಗೃತಿ ಅಭಿಯಾನಗಳು ನಡೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ನಿರ್ದೇಶಕ ಡಾ. ಗುರುಪ್ರಸಾದ್, ಹಿರಿಯ ಮಕ್ಕಳ ತಜ್ಞರಾದ ಡಾ. ಸುರೇಶ್ ಬಾಬು, ಡಾ. ಮೃತ್ಯುಂಜಯ, ಡಾ ರೇವಪ್ಪ, ಡಾ. ಸಚಿನ್ ಬಾತಿ, ಡಾ. ನವೀನ್ ನಾಡಿಗ್, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ ಮತ್ತು ಇತರರು ಉಪಸ್ಥಿತರಿದ್ದರು.

# ಬೋಧಗಯಾ ಟೆಂಪಲ್ ಕಾಯ್ದೆ ರದ್ದತಿಗೆ ಆಗ್ರಹ : ಬುದ್ಧಿಸ್ಟ್ ಫೋರಂನಿಂದ ಪ್ರತಿಭಟನಾ ಮನವಿ ಸಲ್ಲಿಕೆ



ದಾವಣಗೆರೆ, ಡಿ. 1- 'ಬಿಹಾರದ ಬೋಧಗಯಾದಲ್ಲಿರುವ ಮಹಾಬೋಧಿ ವಿಹಾರದ ಸಂಪೂರ್ಣ ಆಡಳಿತ ಬೌದ್ಧರಿಗೆ ಹಸ್ತಾಂತರ, ಬೋಧಗಯಾ ಟೆಂಪಲ್ (ಬಿಟಿ) ಕಾಯ್ದೆ-1949 ರದ್ಧತಿ ಸೇರಿದಂತೆ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಮಸ್ತ ದಲಿತ ಸಂಘಟನೆಗಳು, ಬೌದ್ಧ ಸಂಘ-ಸಂಸ್ಥೆಗಳು, ಬುದ್ಧ ವಿಹಾರಗಳು ಹಾಗೂ ಆಲ್ ಇಂಡಿಯಾ ಬುದ್ಧಿಸ್ಟ್ ಫೋರಂ ವತಿಯಿಂದ ಮಂಗಳವಾರ ಅಪರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರತಿಭಟನಾ ಮನವಿ ಸಲ್ಲಿಸಲಾಯಿತು.

ಬುದ್ಧನಿಗೆ ಜ್ಞಾನೋದಯವಾದ ಬೋಧಗಯಾ ಜಗತ್ತಿನಲ್ಲಿ ಇರುವ ಬೌದ್ಧರಿಗೆ ಪವಿತ್ರ ಸ್ಥಳವಾಗಿದೆ.

ಇದುವರೆಗೂ ಬೌದ್ಧ ಪರಂಪರೆಯ ಆಡಳಿತವನ್ನು ಸಂಪೂರ್ಣವಾಗಿ ಬೌದ್ಧರಿಗೆ ನೀಡಿಲ್ಲ ಎಂದು ಆರೋಪಿಸಿ, ಸಂವಿಧಾನ ದಿನವಾದ ನವೆಂಬರ್ 26ರಂದು ದೇಶದಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದ್ದರ ಹಿನ್ನೆಲೆಯಲ್ಲಿ ನಗರದಲ್ಲೂ ಸಹ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಸಂಘಟನಾಕಾರರು, ನಮ್ಮಗಳ ಪ್ರತಿಭಟನೆ ಬೌದ್ಧ ಧರ್ಮೀಯರ ಮತ್ತು ಅಂಬೇಡ್ಕರ್ ಅನುಯಾಯಿಗಳ ಹಾಗೂ ಭಾರತದ ಸಂವಿಧಾನವಾದಿ ಪ್ರಗತಿಪರ ಚಿಂತಕರ ಸ್ವಾಭಿಮಾನದ ಹಕ್ಕಾಗಿದೆ.

ದೇಶವನ್ನಾಳುವ ಸರ್ಕಾರಗಳು ನವೆಂಬರ್ 26 ರಂದು ಸಂವಿಧಾನ ದಿನಾಚರಣೆಯನ್ನು ಸಂಭ್ರಮದಿಂದ ಆಚರಣೆ ಮಾಡುತ್ತಿವೆ. ಈ ದೇಶದ ಬೌದ್ಧ ಸಮುದಾಯ ಮತ್ತು ಅಂಬೇಡ್ಕರ್ ಅನುಯಾಯಿಗಳು ಸಂವಿಧಾನ ದತ್ತ ಧಾರ್ಮಿಕ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೌದ್ಧರಿಗೆ ತಮ್ಮ ಧಾರ್ಮಿಕ ಕ್ಷೇತ್ರ ಬುದ್ಧಗಯಾದ ಮಹಾಬೋಧಿ ಮಹಾ ವಿಹಾರವನ್ನು ಸ್ವತಂತ್ರವಾಗಿ ನಿರ್ವಹಿಸುವ ಅವಕಾಶ ನೀಡಲು ಸಂವಿಧಾನದ ಕಲಂ-3, 25, 26 ಮತ್ತು 29 ಅನ್ನು ಜಾರಿಗೊಳಿಸಲು ಅಡ್ಡಿಯಾಗಿರುವ ಬಿ.ಟಿ. ಆಕ್ಟ್ 1949ನ್ನು ರದ್ದುಪಡಿಸಿ, ಬುದ್ಧಗಯಾದ ಮಹಾಬೋಧಿ ಮಹಾವಿಹಾರದ ಆಡಳಿತವನ್ನು ಸಂಪೂರ್ಣವಾಗಿ ಬೌದ್ಧರಿಗೆ ನೀಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಡಿ.ಎನ್.ಹಾಲೇಶಪ್ಪ, ಜಿಲ್ಲಾಧ್ಯಕ್ಷ ಮಂಜಪ್ಪ ನೀತಿಗೆರೆ, ಚನ್ನಪ್ಪ, ಗುರು ಪ್ರಸಾದ್, ಶಾಂತರಾಜಪ್ಪ, ವಿಜಯ್, ಚಿದಾನಂದ, ಲಿಂಗರಾಜ್ ಇತರರು ಇದ್ದರು.

# ಕನ್ನಡ ಸಾರಸ್ವತ ಲೋಕಕ್ಕೆ ಕೃಷ್ಣಶರ್ಮರ ಶ್ರೇಷ್ಠ ಕೃತಿಗಳು



ದಾವಣಗೆರೆ, ಡಿ. 1- ಡಾ. ಬೆಟಗೇರಿ ಕೃಷ್ಣಶರ್ಮ ಅವರು ನವೋದಯ ಕಾಲಘಟ್ಟದ ಶ್ರೇಷ್ಠ ಕವಿಗಳು. ನಾವು ಇಂಗ್ಲಿಷ್ ಸಂಸರ್ಗದಿಂದ ಕಳೆದುಕೊಂಡ ದೇಶೀಯತೆಯನ್ನು ಅವರು ನಮಗೆ ಆ ಕಾಲಘಟ್ಟದಲ್ಲಿ ನೆನಪಿಸಿಕೊಟ್ಟಿದ್ದಾರೆ. ಅವರು ಆನಂದಕಂದ ಎಂಬ ಅಂಕಿತ ನಾಮದಲ್ಲಿ ಅನೇಕ ಸಾಹಿತ್ಯ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ ಎಂದು ಪ್ರೊ. ರಾಘವೇಂದ್ರ ಪಾಟೀಲ ತಿಳಿಸಿದರು.

ನಗರದ ಎ.ವಿ.ಕೆ ಮಹಿಳಾ ಕಾಲೇಜಿನ ಕನ್ನಡ ವಿಭಾಗ ಮತ್ತು ಡಾ. ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್ ಬೆಳಗಾವಿ ಇವರುಗಳ ಸಹಯೋಗದಲ್ಲಿ ನಡೆದ 'ಆನಂದಕಂದರ ನಲ್ವಾಡುಗಳು: ಮಂಥನ ಮತ್ತು ಗಾಯನ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆನಂದಕಂದರು ಓದಿದ್ದು ಏಳನೆಯ ತರಗತಿ ಆದರೆ ಅವರ ಸಾಹಿತ್ಯವನ್ನು ಇಂದು ಸ್ನಾತಕೋತ್ತರ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಹಳೆಗನ್ನಡ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅನೇಕ ಕೃತಿಗಳನ್ನು ಸಂಪಾದನೆ ಮಾಡುವ ಕಾರ್ಯವೂ ಬೆಟಗೇರಿ ಕೃಷ್ಣಶರ್ಮರಿಂದ ಆಗಿದೆ. ಅವರ ವಿರಹಿಣಿ, ಒಡನಾಡಿ, ನಲ್ವಾಡುಗಳು ಕೃತಿಗಳು ಪ್ರಕೃತಿ ತತ್ವ ಮತ್ತು ಪುರುಷ ತತ್ವವನ್ನು ಹೇಳುತ್ತಾ ಪ್ರೀತಿ, ಪ್ರೇಮ, ದಾಂಪತ್ಯ ಪ್ರಯಾಣವನ್ನು ಸಾದರಪಡಿಸಿದ್ದನ್ನು ಅವುಗಳಲ್ಲಿ ಕಾಣುತ್ತೇವೆ.

ಮೈಸೂರು ಮಲ್ಲಿಗೆಯಂತೆ ಉತ್ತರ ಕರ್ನಾಟಕದಲ್ಲಿ ಇವರ ನಲ್ವಾಡುಗಳು ಜನಪ್ರಿಯವಾಗಿವೆ. ಅವರು ನಲ್ವಾಡುಗಳಲ್ಲಿ ಕಾಮವೆಂದು ಹೇಳುವ ನುಡಿಯಲ್ಲಿ ಸ್ವೇಚ್ಛಾಚಾರವಿಲ್ಲ. ಅದು ಮನುಷ್ಯನ ಆಂತರಿಕ ಅತ್ಯಂತಿಕ ನೆಲೆ ಆಗಿದೆ. ಅಲ್ಲದೆ ಬಳಸಿಕೊಂಡ ಭಾಷೆ ಮತ್ತು ಗೇಯತೆಗಳು ಕೂಡ ಅಷ್ಟೇ ಉತ್ಕೃಷ್ಟತೆಯಿಂದ ಕೂಡಿದವುಗಳಾಗಿವೆ ಎಂದು ಹೇಳಿದರು.

ಆನಂದಕಂದರ ನಲ್ವಾಡು ಮಂಥನ

### ಪ್ರೊ. ರಾಘವೇಂದ್ರ ಪಾಟೀಲ್ ಶ್ಲಾಘನೆ

ಕುರಿತು ವಿಶೇಷ ಉಪನ್ಯಾಸ ನೀಡಿದ ಡಾ. ಸಿ.ಕೆ. ನಾವಲಗಿ ಅವರು ಇದ್ದದ್ದನ್ನು ಇದ್ದ ಹಾಗೆ ಹೇಳಿದವರು ಜನಪದರು. ಆ ಗುಣವನ್ನು ನಾವು ಆನಂದಕಂದರಲ್ಲಿ ಕಾಣುತ್ತೇವೆ. ವಾಚ್ಯಾರ್ಥ ಸೂಚ್ಯಾರ್ಥದಲ್ಲಿ ಎರಡೂ ರೀತಿಯಲ್ಲಿ ಕವಿತೆಗಳನ್ನು ಆನಂದಕಂದರು ಬರೆದಿದ್ದಾರೆ. ಕಾಮದಿಂದ ಪ್ರಾರಂಭವಾಗಿ ಪರಿಪಕ್ವ ಪ್ರಣಯದವರೆಗೂ ನಲ್ವಾಡು ಸಾಗುತ್ತವೆ. ಆದರೆ ಎಲ್ಲಿಯೂ ಕೂಡ ಅಶ್ಲೀಲವಿಲ್ಲ ಎಂಬುದು ನಾವು ಅಧ್ಯಯನದಿಂದ ಅರಿಯಬಹುದಾಗಿದೆ. ಒಂದರ್ಥದಲ್ಲಿ ಮಹಾರಸಿಕ ಕವಿ ಆನಂದಕಂದರು ಆಗಿದ್ದಾರೆ ಎಂದು ಹೇಳಿದರು. ಹಾಗಿದ್ದರೂ ವಿಮರ್ಶೆ ವಲಯ ಬೆಟಗೇರಿ ಕೃಷ್ಣಶರ್ಮರನ್ನು ಕಡೆಗಣಿಸಿರುವುದು ಖೇದಕರ ಸಂಗತಿ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬಾ.ಮ. ಬಸವ ರಾಜಯ್ಯ ಮಾತನಾಡಿ, ಕಾಲೇಜು ಮಟ್ಟದಲ್ಲಿ ಈ ರೀತಿಯ ಕಾರ್ಯಕ್ರಮ ಆಯೋಜನೆ ಮಾಡುವುದರಿಂದ ಕನ್ನಡ ಸಾಹಿತ್ಯದ ಉದ್ದೇಶ ಮತ್ತು ಮಹತ್ವವನ್ನು ಅರಿಯುವಂತಾಗುತ್ತದೆ. ಅಲ್ಲದೇ ನಮ್ಮ ವಿದ್ಯಾರ್ಥಿಗಳು ಸಾಹಿತ್ಯದ ಬಗ್ಗೆ ಮತ್ತಷ್ಟು ಅಧ್ಯಯನ ನಡೆಸಲು ಸಾಧ್ಯವಾಗುತ್ತದೆ ಎಂದರು ಹೇಳಿದರು.

ಐ.ಕ್ಯೂ.ಎ.ಸಿ ಸಂಯೋಜಕ ಪ್ರೊ. ಆರ್. ಆರ್. ಶಿವಕುಮಾರ್ ಮಾತನಾಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ರಣಧೀರ ಆಧುನಿಕ ಕಾಲದಲ್ಲಿ ಯುವ ಜನಾಂಗ ಹುಸಿ ಪ್ರೀತಿಯಲ್ಲಿ ಮುಳುಗಿ, ಅದೇ ಜೀವನದ ನಿಜವಾದ ಅನುಭೂತಿ ಎಂದು ಅಂದುಕೊಂಡಿದೆ. ಆದರೆ ನಮ್ಮ ಹಿರಿಯ ಸಾಹಿತಿಗಳು ತಮ್ಮ (5ನೇ ಪುಟಕ್ಕೆ)

## ನಗರದಲ್ಲಿ ಇಂದು ಶರಣ ಸಾಹಿತ್ಯ ಪರಿಷತ್ತಿನಿಂದ ಉಪನ್ಯಾಸ

ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕ ಮತ್ತು ಶ್ರೀ ಧರ್ಮಪ್ರಕಾಶ ಜಾಲಿಮರದ ವಿರೂಪಾಕ್ಷಪ್ಪ ಸರ್ಕಾರಿ ಪ್ರೌಢಶಾಲೆ ಇವರುಗಳ ಸಹಯೋಗದಲ್ಲಿ ಇಂದು ಮಧ್ಯಾಹ್ನ 3.30ಕ್ಕೆ ಶ್ರೀಮತಿ ಕಾವೇರಮ್ಮ ಶಾಲೆ ಆವರಣ ದಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

**ದತ್ತಿ ಉಪನ್ಯಾಸ:** ಲಿಂ॥ ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿಯ ದಾನಿಗಳು ಚಿಂದೋಡಿ ಚಂದ್ರಧರ ಮತ್ತು ಲಿಂ॥ ಗೌರಮ್ಮ ವೀರಭದ್ರಯ್ಯ ಹಂಜಗಿಮಠ ದತ್ತಿಯ ದಾನಿಗಳು ಲಿಂ॥ ಹೆಚ್.ಎಂ. ಮಹಾರುದ್ರಯ್ಯನವರ ಮಕ್ಕಳು.

ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಕ.ಸಾ.ಪ.ದ ನಿಕಟಪೂರ್ವ ಅಧ್ಯಕ್ಷ ಡಾ. ಮಂಜುನಾಥ ಕುರ್ಕಿ ಅವರು 'ಶರಣ ಸಾಹಿತ್ಯದಲ್ಲಿ ಸಾಮಾ ಜಿಕ ಮೌಲ್ಯಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮುಖ್ಯೋಪಾಧ್ಯಾಯ ಎಸ್. ಪಿ.ಚಂದ್ರಪ್ಪ, ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ಘಟಕದ ಗೌರವಾಧ್ಯಕ್ಷ ಎಂ.ಎಸ್.ನಾಗರಾಜಪ್ಪ, ಉಪಾಧ್ಯಕ್ಷ ಬುಳ್ಳಾಪುರದ ಮಲ್ಲಿಕಾರ್ಜುನಪ್ಪ, ಸದಸ್ಯರು ಹಾಗೂ ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ರೇಖಾ ಓಂಕಾರಪ್ಪ ಅವರುಗಳು ಉಪಸ್ಥಿತರಿರುವರು.

## ಬಸವ ಬಳಗದಿಂದ ಶರಣರ ಸ್ಮರಣೋತ್ಸವ



ದಾವಣಗೆರೆ, ಡಿ.1- ಬಸವ ಬಳಗ ದಾವಣಗೆರೆ ವತಿಯಿಂದ ನಗರದ ಸರಸ್ವತಿ ಬಡಾವಣೆಯಲ್ಲಿ ಚೆನ್ನಬಸವಣ್ಣನವರ ಹಾಗೂ ಹರಳಯ್ಯ ಮಧುವಯ್ಯರ ಸ್ಮರಣೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಆವರಗೆರೆ ರುದ್ರಮುನಿ ವಹಿಸಿಕೊಂಡಿದ್ದರು. ಚಿನ್ಮಯ ಜ್ಞಾನಿ, ಅವಿರಳ ಜ್ಞಾನಿ ಚೆನ್ನಬಸವಣ್ಣನವರ ಬಗ್ಗೆ ಶಿವಯ್ಯ ಅವರು ತಮ್ಮದೇ ಆದ ಅನುಭವದ ನುಡಿಗಳನ್ನು ನುಡಿದರು. ಕದಳಿ ವೇದಿಕೆಯ ಮಾಜಿ ಅಧ್ಯಕ್ಷರಾದ ವಿನೋದ ಅಜಗಣ ಅವರು ಹರಳಯ್ಯ, ಮಧುವಯ್ಯಗಳ ಬಗ್ಗೆ ತಮ್ಮದೇ ಆದ ಅನುಭಾವದ ನುಡಿಗಳನ್ನು ನುಡಿದರು. ಕು. ವಾಣಿ ನಿರೂಪಿಸಿದರು. ವಂದನಾರ್ಪಣೆಯನ್ನು ವೀಣಾ ಮಂಜುನಾಥ್ ನೆರವೇರಿಸಿದರು.

**ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ / ಲೀಸ್‌ಗೆ ಇದೆ**

34x70 (2380 ಚದರಡಿ) ಅಳತೆಯ ಮೊದಲ ಹಾಗೂ ಎರಡನೇ ಮಹಡಿ ಬಾಡಿಗೆಗೆ /ಲೀಸ್‌ಗೆ ಇದೆ.

ವಿಳಾಸ: ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ಬಸವೇಶ್ವರ ನಗರ, ಹಳೇ ಪಿ.ಬಿ. ರಸ್ತೆ, ದಾವಣಗೆರೆ.

ಸಂಪರ್ಕಿಸಿ : 94493 35577

### ಸಾರ್ವಜನಿಕರ ತಿಳುವಳಿಕೆಗಾಗಿ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಿರುವಂತಹ ಸ್ವತ್ತನ್ನು ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರದಾದರೂ ಯಾವುದಾದರೂ ರೀತಿಯಲ್ಲಿ ಹಕ್ಕು, ಹಿತಾಸಕ್ತಿಗಳಿದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಈ ತಿಳುವಳಿಕೆ ಪತ್ರದ ಮುದ್ರಣದ ದಿನಾಂಕದಿಂದ ನಾಲ್ಕು (4) ದಿನಗಳೊಳಗಾಗಿ ಈ ಕೆಳಗೆ ತಿಳಿಸಿರುವವರನ್ನು ಸಂಪರ್ಕಿಸಬೇಕೆಂದು ತಿಳಿಸಲಾಗಿದೆ.

**ಷೆಡ್ಯೂಲ್**

ಹರಿಹರದ 1ನೇ ವಾರ್ಡ್, ಇ-ಸ್ವತ್ತಿನ ಸಂಖ್ಯೆ 1-5-1119-31, ನಿರ್ಧರಣಾ ಸಂಖ್ಯೆ 12845/666-31ಪಿ2/12845 ಎಂದು ನಮೂದಿರುವ ಸ್ವತ್ತು ಒಂದು ಮತ್ತು ಇ-ಸ್ವತ್ತಿನ ಸಂಖ್ಯೆ 1-5-1119-32, ನಿರ್ಧರಣಾ ಸಂಖ್ಯೆ 12846/666-32/12846 ಎಂದು ನಮೂದಿರುವ ಸ್ವತ್ತು ಒಂದು. ಈ ರೀತಿ ಎರಡೂ ಸೈಟುಗಳು ಅನುಕ್ರಮವಾಗಿ 3.35x9.45 ಮತ್ತು 6.71x9.45 ಮೀಟರ್ ಅಂದರೆ 11x31 ಅಡಿ ಮತ್ತು 22x31 ಅಡಿ ಅಳತೆ ಇದ್ದ ಎರಡು ಸ್ವತ್ತುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಸದರಿ ಸ್ವತ್ತುಗಳನ್ನು ಒಟ್ಟುಗೂಡಿ ಕಟ್ಟಿರುವ ಆರ್.ಸಿ.ಸಿ. ಮನೆಗೆ ಚಕ್ಕುಬಂದಿ: ಪೂರ್ವಕ್ಕೆ : ಸೈಟ್ ನಂ. 31ಪಿ1, ಪಶ್ಚಿಮಕ್ಕೆ : ಸೈಟ್ ನಂ. 33, ಉತ್ತರಕ್ಕೆ : ಬೊಂಗಾಳೆರವರ ಸ್ವತ್ತು, ದಕ್ಷಿಣಕ್ಕೆ : ರಸ್ತೆ


ದಿನಾಂಕ : 01.12.2024
ಸ್ಥಳ : ಹರಿಹರ

ರುದ್ರಗೌಡ ಪಿ. ವಕೀಲರು,
ಶಾಂತಿನಾಥ ಕಾಂಪ್ಲೆಕ್ಸ್, ದೇವಸ್ಥಾನ ರಸ್ತೆ,
ಹರಿಹರ, ಮೊ : 48443 58459



# ಇದು ಪುರುಷರ ಮತಬ್ಯಾಂಕ್ ಗಮನಿಸುವ ಕಾಲವೇ?

**ಮತಗಳಿಗಾಗಿ ಬಿಡ್ಡಿಂಗ್ ಮಾಡುವುದಾದರೆ, ಪುರುಷರ ಮತಗಳಿಗೆ ಏಕೆ ಬಿಡ್ಡಿಂಗ್ ಮಾಡಬಾರದು? ಮಹಿಳೆಯರಷ್ಟಲ್ಲದೇ ಹೋದರೂ, ಹಾಫ್ ರೇಟ್‌ಗಾದರೂ ಬಿಡ್ಡಿಂಗ್ ಮಾಡಬಹುದಿತ್ತು.**



ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭಾ ಚುನಾವಣೆಗಳಿಗೆ ತೆರೆ ಬಿದ್ದಿದೆ. ನಾನಾ ರೀತಿಯ ವಿಶ್ಲೇಷಣೆಗಳು ನಡೆದಿವೆ. ವಿಶೇಷವಾಗಿ ಮಹಿಳೆಯರಿಗೆ ಹಣ ನೀಡುವ ಯೋಜನೆಗಳಿಂದಾಗಿ ಹಾಲಿ ಸರ್ಕಾರಗಳು ತಮ್ಮ ಪಟ್ಟ ಉಳಿಸಿಕೊಂಡಿವೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಈ ಬಾರಿಯಂತೂ ಮಹಿಳೆಯರಿಗೆ ಹಣ ನೀಡುವಲ್ಲಿ ಪಕ್ಷಗಳು ಒಂದು ರೀತಿಯ 'ಬಿಡ್ಡಿಂಗ್' ನಡೆಸಿದವು. ಅವರಿಗಿಂತ ನಾವು ಹೆಚ್ಚು ಹಣ ಕೊಡುತ್ತೇವೆ, ಇವರಿಗಿಂತ ಅವರು ಹೆಚ್ಚು ಹಣ ಕೊಡುತ್ತಾರೆ ಎಂಬ ಪ್ರಚಾರಗಳು ನಡೆದವು. ಆದರೆ, ಈ ಭರಾಟೆಯಲ್ಲಿ ಜನಸಂಖ್ಯೆಯ ಅರ್ಧದಷ್ಟಿರುವ ಪುರುಷರ ಬಗ್ಗೆ ಬಹುತೇಕ ಎಲ್ಲರೂ ಮರೆತಂತಿದೆ.

ಮಹಿಳೆಯರಿಗೆ ಹಣ ಕೊಡುವ ಬಿಡ್ಡಿಂಗ್ ದುಬಾರಿಯಾಗಿದೆ. ಪುರುಷರಿಗೆ ಒಂದಿಷ್ಟು ಹಣ ಕೊಟ್ಟು ನೋಡೋಣ ಎಂದು ಯಾವುದಾದರೂ ಪಕ್ಷ ಇನ್ನು ಮುಂದಾದರೂ ಭಾವಿಸಿದರೆ, ಪುರುಷರು ಅದೇ ಪುಣ್ಯ ಎಂದುಕೊಳ್ಳಬೇಕು.

ದೇಶಾದ್ಯಂತ ಈಗ ಗ್ಯಾರಂಟಿ – ರೇವಡಿ – ಕೊಡುಗೆ ಇತ್ಯಾದಿಗಳ ಭರಾಟೆ ನಡೆದಿದೆ. ಮೀಸಲಾತಿಯ ಮಾತುಗಳೂ ಕೇಳಿ ಬರುತ್ತಿವೆ. ಆದರೆ, ಪುರುಷರಿಗೆ ಸೀಮಿತವಾಗಿ ಒಂದೇ ಒಂದು ಗ್ಯಾರಂಟಿ ಇಲ್ಲವೇ ಮೀಸಲಾತಿಯ ಮಾತು ಬಂದರೆ ಕೇಳಿ. ಮತದಾರರು ಪುರುಷರೆಂಬ ಒಂದು ವರ್ಗ ಇದೆ ಎಂಬುದನ್ನೂ ಮರೆತಿರುವಂತಿದೆ.

ಆದರೆ, ದೂರದ ಅಮೆರಿಕದಲ್ಲಿ ಒಂದಿಷ್ಟು ಆಶಾಭಾವನೆ ಕಂಡು ಬರುತ್ತಿದೆ. ಏಕೆಂದರೆ ಅಲ್ಲಿ ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಲು ಪುರುಷರು, ಅದರಲ್ಲೂ ಯುವ ವಯೋಮಾನದ ಪುರುಷರು ಕಾರಣ ಎಂದು ವಿಶ್ಲೇಷಣೆ ಮಾಡಲಾಗುತ್ತಿದೆ. ಹೀಗಾಗಿ ಪುರುಷರಿಗೆ ಮಣೆ ಹಾಕಿಯೂ ಚುನಾವಣೆ ಗೆಲ್ಲಬಹುದು ಎಂಬುದನ್ನು ರಾಜಕೀಯ ಪಕ್ಷಗಳು ಅರ್ಥ ಮಾಡಿಕೊಳ್ಳಬೇಕಿದೆ.

ದೇಶದಲ್ಲಿ ನಿರುದ್ಯೋಗ ಇದೆ, ಬಡತನ ಹೆಚ್ಚಾಗಿದೆ, ಆರ್ಥಿಕತೆ ಸಂಕಷ್ಟದಲ್ಲಿದೆ ಎಂದೆಲ್ಲಾ ಪ್ರತಿಪಕ್ಷಗಳು ಬೊಬ್ಬೆ ಹಾಕುತ್ತವೆ. ಆದರೆ, ಈ ಎಲ್ಲ ಸಮಸ್ಯೆಗಳಿಂದ ಮಹಿಳೆಯರಷ್ಟೇ ಪ್ರಮಾಣದಲ್ಲಿ ಪುರುಷರೂ ಬಳಲುತ್ತಾರೆ ಎಂಬುದನ್ನು ಮಾತ್ರ ಪರಿಗಣಿಸುವುದಿಲ್ಲ.

ಪುರುಷರಿಗೆ ನೆರವಾಗುವುದು ಒತ್ತಟ್ಟಿಗಿರಲಿ, ಪುರುಷರ ಸಾಧನೆಗಳನ್ನು ಸಂಭ್ರಮಿಸಲೂ ಮಾಧ್ಯಮಗಳು ಹಾಗೂ ಜನಪ್ರತಿನಿಧಿಗಳಿಗೆ ಇಷ್ಟವಿಲ್ಲ. ಯಾವುದೇ ವರ್ಷದ ಜೇಇಇ ಫಲಿತಾಂಶ ತೆಗೆದು ನೋಡಿ, ಪುರುಷರು ಮುಂದಿರುತ್ತಾರೆ. ಯಾವುದೇ ವರ್ಷದ ಐ.ಎ.ಎಸ್. ಪರೀಕ್ಷೆಯ ಫಲಿತಾಂಶ ತೆಗೆದು ನೋಡಿ, ಪುರುಷರು ಹೆಚ್ಚು ಸಂಖ್ಯೆಯಲ್ಲಿ ಆಯ್ಕೆಯಾಗಿರುತ್ತಾರೆ. ಆದರೆ, ಈ ಬಗ್ಗೆ ಯಾರಾದರೂ ಸಂಭ್ರಮಿಸಿದ್ದನ್ನು ನೋಡಿದ್ದೀರಾ? ಮಂಡಳಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿನಿಯರದ್ದೇ ಮೇಲುಗೈ ಎಂದು ದೊಡ್ಡ ಶೀರ್ಷಿಕೆಯಲ್ಲಿ ಪ್ರಕಟಿಸಿ, ಸಂಭ್ರಮಿಸಲಾಗುತ್ತದೆ.

ಅದೆಲ್ಲ ಬಿಡಿ, ಮತ್ತೆ ಚುನಾವಣಾ ವಿಷಯಕ್ಕೆ ಬರೋಣ. ಮಹಿಳೆಯರಿಗೆ ಹಣ ನೀಡುವಲ್ಲಿ ರಾಜಕೀಯ ಪಕ್ಷಗಳು ದೂರಾಲೋಚನೆ ಇಲ್ಲವೇ ಸಬಲೀಕರಣದ ಉದ್ದೇಶ ಹೊಂದಿದ್ದಾರೆ ಎಂದೇನೂ ನನಗೆ ಅನ್ನಿಸುತ್ತಿಲ್ಲ. ಚುನಾವಣಾ ನಿಮಿತ್ತಂ ಬಹುಕೃತ ವೇಶಂ ಎಂಬಂತೆ, ಮತಗಳಿಗಾಗಿ ಈ ಹಣ ಹಂಚಲಾಗುತ್ತಿದೆ. ನಿಜವಾಗಿಯೂ ಮಹಿಳಾ ಪರ ಕಾಳಜಿ ಇದ್ದಿದ್ದರೆ, ಕಾನೂನು ವ್ಯವಸ್ಥೆ ಬಲಪಡಿಸಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳಿಗೆ ತ್ವರಿತ ನ್ಯಾಯ ಒದಗಿಸಬೇಕಿತ್ತು. ಅಪೌಷ್ಟಿಕತೆಯಿಂದ ಬಳಲುತ್ತಿರುವವರಲ್ಲಿ ಮಹಿಳೆಯರೇ ಹೆಚ್ಚಾಗಿರುವ ಕಾರಣ, ಈ ಬಗ್ಗೆ ತ್ವರಿತ ಕ್ರಮ ತೆಗೆದುಕೊಳ್ಳಬೇಕಿತ್ತು. ಅಂತಹ ಯಾವುದೇ ಆಸಕ್ತಿ ರಾಜಕೀಯ ಮಂದಿಯಲ್ಲಿ ಕಂಡು ಬರುತ್ತಿಲ್ಲ.

ಹೀಗಾಗಿ ಮತಗಳಿಗಾಗಿ ಬಿಡ್ಡಿಂಗ್ ಮಾಡುವುದಾದರೆ, ಪುರುಷರ ಮತಗಳಿಗೆ ಏಕೆ ಬಿಡ್ಡಿಂಗ್ ಮಾಡಬಾರದು? ಮಹಿಳೆಯರಷ್ಟಲ್ಲದೇ ಹೋದರೂ, ಹಾಫ್ ರೇಟ್‌ಗಾದರೂ ಬಿಡ್ಡಿಂಗ್ ಮಾಡಬಹುದಿತ್ತು. ಹೋಗಲಿ ಉಚಿತ ಬಸ್ ಸಂಚಾರದಂತಹ ಅಲ್ಪ ಕಾಣಿಕೆಯನ್ನಾದರೂ ಕೊಡಬಹುದಿತ್ತು. ಆದರೆ, ಪುರುಷರನ್ನೇ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಕೇವಲ ಮಹಿಳಾ ಯೋಜನೆಗಳ ಕಡೆ ಗಮನ ಕೇಂದ್ರೀಕರಿಸಿದ ಕಾರಣ ಪ್ರತಿಪಕ್ಷಗಳು ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ನಲ್ಲಿ ಸೋಲಬೇಕಾಯಿತು.

ಇದರಿಂದ ಪಾಠ ಕಲಿತು ಪಕ್ಷಗಳು ಇನ್ನು ಮುಂದಾದರೂ, ಕೊಡುಗೆ – ರೇವಡಿ – ಗ್ಯಾರಂಟಿ ಇತ್ಯಾದಿಗಳಲ್ಲಿ ಪುರುಷರಿಗೆ ಪಾಲು ಕೊಡಬೇಕಿದೆ. ಇದರಿಂದ ಮತ ಬ್ಯಾಂಕ್ ಗಟ್ಟಿ ಮಾಡಿಕೊಂಡು ಅಧಿಕಾರದ ರುಚಿ ನೋಡಬಹುದು. ಟ್ರಂಪ್ ನೋಡಿ ಪಾಠ ಕಲಿಯುವ ಸಮಯ ಇದಾಗಿದೆ.

**- ಎಸ್.ಎ. ಶ್ರೀನಿವಾಸ್**

# ಏಡ್ಸ್ ಜಾಗೃತಿಗೆ ನಗರದಲ್ಲಿ ವಾಕಥಾನ್




ದಾವಣಗೆರೆ, ಡಿ.1- ಡಿಸೆಂಬರ್ 1 ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಜೆ.ಜೆ.ಎಂ ಮೆಡಿಕಲ್ ಕಾಲೇಜ್ ಮತ್ತು ಎಸ್.ಎಸ್.ಐ.ಎಂ.ಎಸ್‌ನ ಚರ್ಮರೋಗ ತಜ್ಞರು ಏಡ್ಸ್ ಕುರಿತು ಜಾಗೃತಿ ಮೂಡಿಸಲು ವಾಕಥಾನ್ ಆಯೋಜಿಸಿದ್ದರು.

ದಾವಣಗೆರೆ ಡರ್ಮಟೋಲಜಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಡಾ. ಬಿ. ಕೆ. ವಿಶ್ವನಾಥ್, ಹಿರಿಯ ಚರ್ಮರೋಗ ತಜ್ಞ ಡಾ. ನಾಡಿಗ ರಾಜಶೇಖರ್, ಜೆ.ಜೆ.ಎಂ.ಎಂ.ಸಿ. ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಸೂಗರೆಡ್ಡಿ ಭಾಗವಹಿಸಿದ್ದರು.

ಎಸ್.ಎಸ್.ಐ.ಎಂ.ಎಸ್ ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ್ ಹುಲ್ಮನಿ, ಪ್ರಾಧ್ಯಾಪಕರಾದ ಡಾ. ಮಂಗಳ ಎಚ್.ಸಿ., ಇನ್ನಿತರೆ ಚರ್ಮರೋಗ ತಜ್ಞರು ಹಾಗೂ ಚರ್ಮರೋಗ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಂಡು ಸಾಂಕ್ರಾಮಿಕ ರೋಗದ ಬಗ್ಗೆ ಅರಿವು ಮೂಡಿಸಿದರು.

'ಏಡ್ಸ್ ಮುಕ್ತ ಸಮಾಜದ ದೃಷ್ಟಿಕೋನ' ಎಂಬ ಘೋಷವಾಕ್ಯದೊಂದಿಗೆ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ವಾಕಥಾನ್‌ನೊಂದಿಗೆ ವಿದ್ಯಾರ್ಥಿಗಳು ಏಡ್ಸ್ ಬಗ್ಗೆ ಅರಿವು ಮೂಡಿಸಲು ಬೀದಿ ನಾಟಕ ಪ್ರದರ್ಶಿಸಿದರು.

# ನಿಖಿಲ್‌ಗೆ ಮಾರ್ಗದರ್ಶನ ನೀಡುವ ಜವಾಬ್ದಾರಿ ನಿಮ್ಮದು

**(1ನೇ ಪುಟದಿಂದ)** ನಮ್ಮ ಪಕ್ಷವನ್ನು ಯಾವುದೇ ಶಕ್ತಿಗಳು ಅಂತ್ಯಗೊಳಿಸಲಾರವು ಎಂದು ಹೇಳಿದರು.

ಪ್ರತಿ ಬೂತ್‌ಗಳಲ್ಲಿ ಸದಸ್ಯತ್ವ ನೋಂದಣಿಗೆ ಚಾಲನೆ ಆಗಬೇಕು. ಇನ್ನು ಕೆಲವು ಜಿಲ್ಲೆಗಳಲ್ಲಿ ಸದಸ್ಯತ್ವ ಚಾಲನೆ ನಿಂತಿದೆ ಅದನ್ನು ಮತ್ತೆ ಆರಂಭಿಸಬೇಕು. ಉಪಚುನಾವಣೆ ಫಲಿತಾಂಶಗಳು ಪಕ್ಷದ ಭವಿಷ್ಯವನ್ನ ತೀರ್ಮಾನಿಸುವುದಿಲ್ಲ ತಿಳಿಸಿದರು. 2018ರಲ್ಲಿ 2013ರಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ 75 ಸ್ಥಾನಗಳಿಗೆ ಕುಸಿದಿತ್ತು. ಸಾಮಾನ್ಯ ಚುನಾವಣೆಯ ಚಿತ್ರವೇ ಬೇರೆ, ಸ್ವತಃ ಅವರ ಪಕ್ಷದ ಶಾಸಕರೇ ಅಭಿವೃದ್ಧಿಗೆ ಹಣವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಈ ಸರ್ಕಾರವನ್ನು ಕೆಡವಲು ನಾವು ಬಿಜೆಪಿಯೊಂದಿಗೆ ಸಹಕಾರ ಮಾಡಬೇಕಾಗಿದೆ. ಜೆಡಿಎಸ್ ಪಕ್ಷ ಎಂದಿಗೂ ಹಿಂದಕ್ಕೆ ಬಿದ್ದಿಲ್ಲ. ದೇವೇಗೌಡರು ಮುಖ್ಯಮಂತ್ರಿ ಆದರು, ನಂತರ ಪ್ರಧಾನಿ ಆದರು. ಈಗ 2023ರ ಚುನಾವಣೆಯಲ್ಲಿ ಕೇವಲ 18 ಸ್ಥಾನಗಳನ್ನು ಗೆದ್ದಿದ್ದರೂ ನಾನು ಕೇಂದ್ರ ಸಚಿವನಾಗಿದ್ದೇನೆ ಎಂದು ಹೇಳಿದರು.

ಸಭೆಯಲ್ಲಿ ಬಂಡೆಪ್ಪ ಖಾಶೆಂಪೂರ್, ಹೆಚ್.ಕೆ ಕುಮಾರಸ್ವಾಮಿ, ಸಾ.ರಾ.ಮಹೇಶ್, ಸುರೇಶ ಬಾಬು, ನಿಖಿಲ್ ಕುಮಾರಸ್ವಾಮಿ, ಬಾಲಕೃಷ್ಣ, ಶಾರದಾ ಪೂರ್ಯನಾಯಕ್, ಲೀಲಾ ದೇವಿ ಪ್ರಸಾದ್ ಸೇರಿದಂತೆ ಹಲವು ಪ್ರಮುಖ ನಾಯಕರು ಪಾಲ್ಗೊಂಡಿದ್ದರು.

# ಬಾಣಂತಿ, ಶಿಶು ಮರಣ ತಡೆಯಲು ಜಿಲ್ಲಾಡಳಿತ ಅಗತ್ಯ ಕ್ರಮವಹಿಸಲಿ



ದಾವಣಗೆರೆ, ಡಿ.1- ಬಾಣಂತಿ ಹಾಗೂ ಶಿಶು ಮರಣ ತಡೆಯಲು ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಚಿಗಟೇರಿ ಜಿಲ್ಲಾ ಆಸ್ಪತ್ರೆ ಮತ್ತು ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೇವಲ ಒಂದೊಂದೇ 'ನವಜಾತ ಶಿಶುವಿನ ಆರೈಕೆ ಘಟಕ' ಇರುವುದರಿಂದ ಏಳು ತಿಂಗಳಲ್ಲಿ 125 ನವಜಾತ ಶಿಶುಗಳು ಹಾಗೂ 28 ಬಾಣಂತಿಯರು ಸಾವನ್ನಪ್ಪಿರುವುದು ಆಘಾತಕಾರಿಯಾಗಿದೆ. ಜಿಲ್ಲೆಯಾದ್ಯಂತ ಸಮರ್ಪಕ ವೈದ್ಯಕೀಯ ಸೌಲಭ್ಯಗಳು ಮತ್ತು ನವಜಾತ ಶಿಶುವಿನ ಆರೈಕೆ ಘಟಕ ಇಲ್ಲದಿರುವುದರಿಂದ ಬಾಣಂತಿ ಹಾಗೂ ಶಿಶುಮರಣ ಸಂಖ್ಯೆ 28 ಹಾಗೂ 125ಕ್ಕೆ ಏರಿಕೆಯಾಗಿದೆ. ಇದು ಸರ್ಕಾರದ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಏಳೇ ತಿಂಗಳಲ್ಲಿ ನೂರಾರು ಶಿಶುಗಳು ಸಾವನ್ನಪ್ಪಿರುವುದು ಆಘಾತಕಾರಿ ಸಂಗತಿ. ಸರ್ಕಾರ ಈ ಬಗ್ಗೆ ಸೂಕ್ತ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಆಸ್ಪತ್ರೆಗಳಿಗೆ ಅಗತ್ಯವಿರುವ ವೈದ್ಯರು, ಸಿಬ್ಬಂದಿ ಹಾಗೂ ಮೂಲ ಸೌಲಭ್ಯಗಳನ್ನು ವಿಳಂಬ ಮಾಡದೇ ಒದಗಿಸಬೇಕು. ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಕಾರ್ಯಾರಂಭ ಮಾಡಬೇಕೆಂದು ಬೇಡಿಕೆ ಇಟ್ಟರು.

ಜಿಲ್ಲಾಸ್ಪತ್ರೆ ಹಾಗೂ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ನವಜಾತ ಶಿಶುವಿನ ಆರೈಕೆ ಘಟಕ, ಹೆಚ್ಚಿನ ಸಂಖ್ಯೆಯಲ್ಲಿ ವೆಂಟಿಲೇಟರ್ ಪೂರೈಕೆ ಹಾಗೂ ಇತರೆ ಮೂಲ ಸೌಲಭ್ಯ ಒದಗಿಸುವಂತೆ ಮನವಿ ಮಾಡಿದ್ದಾರೆ.

ರೋಗಿ ಮತ್ತು ಶುಶ್ರೂಷಕರ ಅನುಪಾತ 2:1 ಇರುವಂತೆ ಶುಶ್ರೂಷಕರನ್ನು ಕೂಡಲೇ ನೇಮಿಸಬೇಕು. ರೋಗಿಗಳಿಗೆ ಸಕಾಲಕ್ಕೆ ಔಷಧಗಳು ಉಚಿತವಾಗಿ ದೊರೆಯುವಂತೆ ಕ್ರಮ ವಹಿಸಬೇಕೆಂದು ಸಂಘಟನೆಯ ಜಿಲ್ಲಾಧ್ಯಕ್ಷೆ ಜ್ಯೋತಿ ಕುಕ್ಕುವಾಡ ಮತ್ತು ಕಾರ್ಯದರ್ಶಿ ಕೆ. ಭಾರತಿ ಒತ್ತಾಯಿಸಿದ್ದಾರೆ.

# ತ್ಯಾವಣಿಗೆ : ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಕರ್ನಾಟಕ ರಾಜ್ಯೋತ್ಸವ

ತ್ಯಾವಣಿಗೆ, ಡಿ. 1- ಇಲ್ಲಿನ ಸರ್ಕಾರಿ ಪ.ಪೂ. ಕಾಲೇಜು ಮತ್ತು ಅಪ್ಪು ಸಹಕಾರ ಸಂಘದ ಸಂಯುಕ್ತಾಶ್ರಯದಲ್ಲಿ ಕ್ಲಸ್ಟರ್ ಮಟ್ಟದ ಸುವರ್ಣ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.



ಯೂನಿಯನ್ ಬ್ಯಾಂಕ್‌ನ ವ್ಯವಸ್ಥಾಪಕ ಶ್ರೀಹರ್ಷ ಕಾರ್ಯಕ್ರಮ ಉದ್ಘಾಟಿಸಿ ಕರ್ನಾಟಕದಲ್ಲಿ ಕನ್ನಡ ಭಾಷೆಯ ಪ್ರಾಮುಖ್ಯತೆ ಮತ್ತು ಬಳಸಿ ಬೆಳೆಸುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಏರ್ಪಡಿಸಿದ್ದ ಸ್ಪಷ್ಟ ಓದು, ಶುದ್ಧ ಬರಹ ಮತ್ತು ಕಾವ್ಯ ವಾಚನ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಅಪ್ಪು ಸಹಕಾರ ಸಂಘದ ಅಧ್ಯಕ್ಷ ಗಂಗಾಧರಯ್ಯ ಕನ್ನಡ ಭಾಷೆಯ ಐತಿಹಾಸಿಕ ಮಹತ್ವದ ಬಗ್ಗೆ ತಿಳಿಸಿದರು. ಹಿರಿಯ ಉಪನ್ಯಾಸಕ ವಿವೇಕಾನಂದ, ಪ್ರಾಂಶುಪಾಲ ವಿ.ಎಸ್. ಮಲ್ಲಿಕಾರ್ಜುನ್ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಅಣ್ಣಪ್ಪ, ಸಿಬಿಸಿ ಉಪಾಧ್ಯಕ್ಷ ಅಣ್ಣಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಆಂಜನೇಯ, ಸದಸ್ಯರಾದ ಶಿವಕುಮಾರ್, ಮಲ್ಲೇಶಪ್ಪ, ಜಯರಾಂ, ಹಾಗೂ ಇತರರು ಉಪಸ್ಥಿತರಿದ್ದರು. ಕಾಲೇಜು ವಿಭಾಗದ ಉಪನ್ಯಾಸಕರು ಹಾಗೂ ಪ್ರೌಢ ಶಾಲೆಯ ಶಿಕ್ಷಕರು ಮತ್ತು ಕ್ಲಸ್ಟರ್ ನ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

ಕು. ಮೇಘನ ಸಂಗಡಿಗರು ಪ್ರಾರ್ಥಿಸಿದರು. ಚಂದ್ರಶೇಖರ ನಾಯ್ಕ ಸ್ವಾಗತಿಸಿದರು. ಮಂಜಪ್ಪ ಎ.ಎಸ್. ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕರ ವೀಂದ್ರನಾಥ್ ಎಚ್.ಕೆ. ವಂದಿಸಿದರು, ಮಹಾಂತೇಶ್ ಬಿ. ನಿಟ್ಟೂರು ಕಾರ್ಯಕ್ರಮ ನಿರೂಪಿಸಿದರು.

## ಹಟ್ಟಿ : ಸಿಲಿಂಡರ್ ಸ್ಫೋಟ

ಚನ್ನಗಿರಿ, ಡಿ. 1 - ಹಟ್ಟಿ ಗ್ರಾಮದ ಮನೆಯೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡ ಹಿನ್ನೆಲೆಯಲ್ಲಿ ಶಾಸಕ ಬಸವರಾಜು ವಿ. ಶಿವಗಂಗಾ ಅವರು ಭೇಟಿ ನೀಡಿ, ಸಂತ್ರಸ್ತ ಹಬೀಬ್ ಮತ್ತು ಆಯಾಬ್ ಖಾನ್ ಅವರ ಕುಟುಂಬಕ್ಕೆ ವೈಯಕ್ತಿಕವಾಗಿ 10 ಸಾವಿರ ರೂ. ನೀಡುವ ಮೂಲಕ ಆತ್ಮಸ್ಥೈರ್ಯ ತುಂಬಿದರು. ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಈ ವೇಳೆ ಉಪವಿಭಾಗಾಧಿಕಾರಿ ಅಭಿಷೇಕ್ ತಹಶೀಲ್ದಾರ್ ಶಂಕ್ರಪ್ಪ, ಪೊಲೀಸ್ ಅಧಿಕಾರಿಗಳು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# 'ನೋ ಸ್ಕಾಲ್ ಪೆಲ್ ವ್ಯಾಸಕ್ಟಮಿ' ಕುರಿತು ಜಾಗೃತಿ



**ಹೊಳೆಸಿರಿಗೆರೆ**

ಮಲೇಬೆನ್ನೂರು, ಡಿ. 1 - ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ನೋ ಸ್ಕಾಲ್ ಪೆಲ್ ವ್ಯಾಸಕ್ಟಮಿ ಕುರಿತು ಜಾಗೃತಿ ಮೂಡಿಸುವ ಸೇವಾ ಸಪ್ತಾಹ ಕಾರ್ಯಕ್ರಮವನ್ನು ಟಿಹೆಚ್‌ಒ ಡಾ. ಅಬ್ದುಲ್ ಖಾದರ್ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ವ್ಯಾಸಕ್ಟಮಿ ಎಂದರೆ ಪುರುಷರಿಗೆ ನಡೆಸುವ ಶಸ್ತ್ರ ಚಿಕಿತ್ಸೆ ಇದಾಗಿದ್ದು ಇದು ಶಾಶ್ವತ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಆಗಿದೆ. ಮಾಮೂಲಿನ ಶಸ್ತ್ರ ಚಿಕಿತ್ಸೆ ತರ ಯಾವುದೇ ಗಾಯ ಅಥವಾ ಹೊಲಿಗೆ ಹಾಕುವ ಪ್ರಮೇಯ ಇರುವುದಿಲ್ಲ. ಈ ಶಸ್ತ್ರ ಚಿಕಿತ್ಸೆಯಾದ ನಂತರ ನಡೆದುಕೊಂಡೇ ಮನೆಗೆ ಹೋಗಬಹುದು. ಯಾವುದೇ ತೊಂದರೆ ಇರುವುದಿಲ್ಲ. ಈ ಫಲಾನುಭವಿಗಳಿಗೆ ಶಸ್ತ್ರ ಚಿಕಿತ್ಸೆ ನಂತರ 1100 ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಲಾಗುವುದು ಎಂದು ಡಾ ಖಾದರ್ ತಿಳಿಸಿದರು.

ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಚೇತನ್ ಮಾತನಾಡಿ, ನವಂಬರ್ 21ರಿಂದ ನವೆಂಬರ್ 27 ರವರೆಗೆ ಅರಿವು ಮೂಡಿಸುವುದು ಮತ್ತು ಪ್ರೇರೇಪಿಸುವ ಕಾರ್ಯಕ್ರಮ ಇರುತ್ತದೆ ಎಂದು ತಿಳಿಸಿದರು.

ನವಂಬರ್ 28 ರಿಂದ ಡಿಸೆಂಬರ್ 4ರ ವರೆಗೆ ಸೇವಾ ಸಪ್ತಾಹ ಇರುತ್ತದೆ. ಜನಸಂಖ್ಯಾ ನಿಯಂತ್ರಣಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದರು. ತಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ ಉಮ್ಮಣ್ಣ ಅವರು, ಜನರು ಇದರ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು. 'ಇಂದಿನಿಂದಲೇ ನಿರ್ಧರಿಸೋಣ ಕುಟುಂಬ ಯೋಜನೆ ಬಗ್ಗೆ ದಂಪತಿಗಳು ಕೂಡಿ ಚರ್ಚಿಸೋಣ' ಎಂಬ ಸಂದೇಶದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಕೇಂದ್ರದ ಔಷಧಿ ದಾಸ್ತಾನುಗಾರರಾದ ಲತಾ, ಪ್ರಯೋಗಶಾಲಾ ತಂತ್ರಜ್ಞ ದೇವರಾಜ್, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಪ್ರಕಾಶ್ ನಾಯಕ್, ತಿಪ್ಪೇಸ್ವಾಮಿ, ಆರೋಗ್ಯ ಸುರಕ್ಷಣಾಧಿಕಾರಿಗಳಾದ ಆಶಾರಾಣಿ, ಸವಿತಾ, ಆಶಾ ಕಾರ್ಯಕರ್ತೆ ಮಾಲಾಶ್ರೀ ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಕಾಕನೂರಿನಲ್ಲಿ 'ವಿದ್ಯಾರ್ಥಿ ಚೇತನ' ಆಯುಷ್ ಸೇವಾ ಕಾರ್ಯಕ್ರಮ



ದಾವಣಗೆರೆ, ಡಿ.1- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಆಯುಷ್ ಇಲಾಖೆ ವತಿಯಿಂದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ವಿದ್ಯಾರ್ಥಿ ಚೇತನ ಆಯುಷ್ ಸೇವಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾಕನೂರಿನ ಸಮಾಜ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜರುಗಿದ ಈ ಕಾರ್ಯಕ್ರಮವನ್ನು ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ. ಯು.ಯೋಗೇಂದ್ರಕುಮಾರ್ ಉದ್ಘಾಟಿಸಿ ಮಾತನಾಡಿದರು.

ಯೋಗ ತರಬೇತುದಾರರಿಂದ ಪ್ರಾತ್ಯಕ್ಷಿಕೆ ಯನ್ನು ನೀಡಲಾಯಿತು. ವೈದ್ಯಾಧಿಕಾರಿಗಳಾದ ಡಾ. ಶಾಲಿನಿ ಡಿ., ಡಾ. ಸದಾಶಿವ ಕೆ, ಡಾ.ಸಿದ್ದೇಶ್, ಡಾ. ಶ್ವೇತ ಡಿ.ಎಂ., ವಸತಿ ನಿಲಯದ ಪ್ರಾಂಶುಪಾಲ ಪುರದ್ ಹಾಗೂ ಇತರರು ಹಾಜರಿದ್ದರು.

# ಇಂದು ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್‌ನಲ್ಲಿ ವಾಣಿಜ್ಯೋತ್ಸವ

ದಾವಣಗೆರೆ ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬಾಪೂಜಿ ಬಿ-ಸ್ಕೂಲ್ಸ್ ಆಡಿಟೋರಿಯಂ ನಲ್ಲಿ ಇಂದು ಬೆಳಗ್ಗೆ 10.30ಕ್ಕೆ ರಾಜ್ಯ ಮಟ್ಟದ ವಾಣಿಜ್ಯ ಎಕ್ಸಿಬಿಷನ್ '6ನೇ ವಾಣಿಜ್ಯೋತ್ಸವ-2024' ಏರ್ಪಡಿಸಲಾಗಿದೆ.

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್‌ನ ಅಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ವಾಣಿಜ್ಯ ವಿಭಾಗದ ಅಧ್ಯಕ್ಷೆ ಡಾ. ಸುಪ್ರಿಯಾ ಆರ್. ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎಂ.ಎಸ್.ಬಿ. ಕಾಲೇಜಿನ ಪ್ರಾಂಶುಪಾಲರಾದ ನೀಲಾಂಬಿಕಾ ಜಿ.ಸಿ.,ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್‌ನ ಪ್ರಾಂಶುಪಾಲ ಡಾ. ಬಿ. ವೀರಪ್ಪ, ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಹೆಚ್.ವಿ. ಉಪಸ್ಥಿತರಿರುವರು.

**ಸೈಟ್, ಮನೆ, ಜಮೀನು**
ನೇರ ವ್ಯಾಪಾರ, ಸ್ವಚ್ಛ ದಾಖಲೆ, ಸರಿಯಾದ ಅಳತೆಯ ಗುರಿ ನನ್ನದು. ಅರ್ಧ (1/2%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮಗೆಳೆಯರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಶಕ್ತಿ ನಗರ ಹತ್ತಿರ ಭಗೀರಥ ಸರ್ಕಲ್ ಹತ್ತಿರ 22 1/2x40, 22 1/2x40 South ಅಕ್ಕ-ಪಕ್ಕ, Rate - 6500/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 30x40 North, 30x40 East, 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ 1ನೇ ಬಸ್ ಸ್ಟಾಪ್‌ನಲ್ಲಿ 40x60 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ ಅಕ್ಕ-ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, 30x40 ಉತ್ತರ, ಶಿವ-ಪಾರ್ವತಿ ಬಡಾವಣೆಯಲ್ಲಿ 40x60 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**SPOKEN ENGLISH**
1Std to 7th Std Tutions
8 Years of teaching experience
97426 10385

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಬೇಕಾಗಿದ್ದಾರೆ**
ಸೇಲ್ಸ್ ಸ್ಟಾಫ್ - 2 (ಹುಡುಗ/ಹುಡುಗಿ)
ಮಾರ್ಕೆಟಿಂಗ್ ಸ್ಟಾಫ್-2
ಗೋಡೌನ್ ಸ್ಟಾಫ್ -2
ಸಮ್ಯಕ್ ಸೆರಾಮಿಕ್ಸ್
ಹದಡಿ ರಸ್ತೆ, ದಾವಣಗೆರೆ.
80888 92673

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ 40 ಅಡಿ ರೋಡಿಗಿದೆ, 30x40 South, 30x40 North, 30x45 East, 30x45 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**SITES FOR SALE**
30x45 size at Karur village, DUDA approved
Contact : Bhuvi.com
91489 09259

**WANTED**
Boys & Girls Required for Billing Work at Food Mart Supermarket.
Quli : Any Degree
98864 63531

**REPAIR OR EXCHANGE**
ಗ್ಯಾಸ್‌ಗೀಸರ್, ಸ್ಟವ್ ರಿಪೇರಿ ಮಾಡಲಾಗುವುದು.
ರತ್ನ ಮಾರ್ಕೆಟಿಂಗ್
99019 40727

**ಬೇಕಾಗಿದ್ದಾರೆ**
ರಾಂ ಅಂಡ್ ಕೋ ಸರ್ಕಲ್ ಬಳಿಯಿರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಕಂಪ್ಯೂಟರ್ ಜ್ಞಾನವುಳ್ಳ ವರಿಗೆ ಆದ್ಯತೆ.
70221 58935

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮನ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**2BHK ಮನೆ ಬಾಡಿಗೆಗೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್, 8ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 2 BHK ಮನೆ ಬಾಡಿಗೆಗೆ ಇದೆ. ಬೋರ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
95907 21624, 78922 68073

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ARTIFICIAL INTELLIGENCE COURSE (AI)**
Class 6 Std to 10 Std
Bruit Solutions
Nijalingappa Badavane
96201 53806

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಬೇಕಾಗಿದ್ದಾರೆ**
ಸೀನಿಯರ್ ಅಕೌಂಟೆಂಟ್ : ಟ್ಯಾಲಿ ಪ್ರೈಮ್, ಬಿಲ್ಲಿಂಗ್ ಹಾಗೂ ಜಿಎಸ್ ಟಿ ಫೈಲಿಂಗ್‌ನಲ್ಲಿ ಅನುಭವವುಳ್ಳವರು.
ವೇತನ ರೂ.20,000/- ದಿಂದ 25,000/-
ರಿಷಿ ಸ್ಪೈಸ್ ಇಂಡಸ್ಟ್ರೀಸ್ ಪ್ರೈ.ಲಿ.,
ಪಿ.ಬಿ.ರಸ್ತೆ, ದಾವಣಗೆರೆ. ಸ್ವವಿವರವನ್ನು ಈ ನಂ.ಗೆ
87927 06279
ವಾಟ್ಸಾಪ್ ಮಾಡಿ ಅಥವಾ ಮೇಲ್ ಮಾಡಿ.
info@risispice.com

**ಬೇಕಾಗಿದ್ದಾರೆ**
ಮನೆಯ ಅಡುಗೆ ಕೆಲಸಕ್ಕೆ ಅನುಭವವುಳ್ಳ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ವಿದ್ಯಾನಗರ, ಕಾಫಿ ಡೇ ಹತ್ತಿರ, ದಾವಣಗೆರೆ.
99457 64377, 9449973956

**FACULTY REQUIRED**
For Java and Python Subjects
Experience : 0-1 Year, Work Location : Davanagere (Send your resume to the provided number )
97380 14849

**ಬೇಕಾಗಿದ್ದಾರೆ**
ಮೈಲಾರ ಲಿಂಗೇಶ್ವರ ನಗರ ಸಾರಿಗೆಗೆ ಡ್ರೈವರ್ ಮತ್ತು ಮಹಿಳಾ ಕಂಡಕ್ಟರ್ ಬೇಕಾಗಿದ್ದಾರೆ.
94484 42999
98448 42189

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ
ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15,000 ವಸತಿ ಉಚಿತ. ಸಂಪರ್ಕಿಸಿ :
97400 98047

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ. 1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ನೀವು ಇಷ್ಟ ಪಟ್ಟವರು ನಿಮ್ಮವರಾಗಲು 100% ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ :
ಕೊಳ್ಳೆಗಾಲದಿಂದ ನೇರ ಪರಿಹಾರ
89716 99826

**WANTED**
Experience Accountant (Male) only
Shiva Stone Crusher
Davangere.
9986418635, 9945239888

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಪಕ್ಷ ವಿರೋಧಿ ಚಟುವಟಿಕೆ ಆರೋಪ

## ಶಿಗ್ಗಾವಿಯಲ್ಲಿ ಕ್ರಮ, ದಾವಣಗೆರೆಯಲ್ಲಿ ಏಕಿಲ್ಲ



ಪಕ್ಷದ ವರಿಷ್ಠರನ್ನು ಪ್ರಶ್ನಿಸಿದ ದೂಡಾ ಮಾಜಿ ಅಧ್ಯಕ್ಷ ಎ. ವೈ ಪ್ರಕಾಶ್

ದಾವಣಗೆರೆ, ಡಿ. 1- ಕಳೆದ ವಾರ ನಡೆದ ವಿಧಾನಸಭಾ ಉಪಚುನಾವಣೆ ಯಲ್ಲಿ ಶಿಗ್ಗಾಂವ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸೋತ ಹಿನ್ನೆಲೆಯಲ್ಲಿ ಪಕ್ಷದ ಕೆಲವು ಕಾರ್ಯಕರ್ತರನ್ನು ಪಕ್ಷ ವಿರೋಧಿ ಚಟುವಟಿಕೆ ಕಾರಣ ನೀಡಿ ಉಚ್ಚಾಟಿಸಲಾಗಿದೆ. ಆದರೆ, ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಕಾರಣರಾದ ವ್ಯಕ್ತಿಗಳ ಮೇಲೆ ಇದುವರೆಗೂ ಏಕೆ ಕ್ರಮ ಕೈಗೊಂಡಿಲ್ಲ ಎಂದು ದಾವಣಗೆರೆ – ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ. ವೈ ಪ್ರಕಾಶ್ ಅವರು ಪಕ್ಷದ ವರಿಷ್ಠರನ್ನು ಪ್ರಶ್ನಿಸಿದ್ದಾರೆ.

ಹೊಂದಾಣಿಕೆ ರಾಜಕಾರಣವೇ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಸೋಲಲು ಕಾರಣವಾಗಿದೆ. ಯಾರು ಯಾರ ಜೊತೆ ಯಾವ ರೀತಿ ಹೊಂದಾಣಿಕೆ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ರಾಜಕೀಯ ಬಲ್ಲ ಎಲ್ಲ ಪಕ್ಷಗಳ ಕಾರ್ಯಕರ್ತರು, ಮತದಾರರು ಮುಕ್ತವಾಗಿ ಮಾತನಾಡಿಕೊಳ್ಳುತ್ತಿದ್ದಾರೆ.

ಒಟ್ಟಿನಲ್ಲಿ ಈ ಹೊಂದಾಣಿಕೆ ರಾಜಕೀಯದಿಂದಾಗಿ ಬಿಜೆಪಿ ಅಭ್ಯರ್ಥಿ ದಾವಣ ಗೆರೆ ಲೋಕಸಭಾ ಕ್ಷೇತ್ರ ದಲ್ಲಿ ಸೋಲಬೇಕಾಯಿತು. ಅದಕ್ಕೆ ಕಾರಣರಾದ ಜಿಲ್ಲೆಯ ಎಲ್ಲಾ ಕ್ಷೇತ್ರದ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಮತ್ತು ಪಕ್ಷದ ಸೋಲಿಗೆ ಕಾರಣರಾದ ವ್ಯಕ್ತಿಗಳನ್ನು ತಕ್ಷಣ ಪಕ್ಷ ದಿಂದ ಉಚ್ಚಾಟಿಸಬೇಕು ಎಂದು ಆಗ್ರಹಿಸಿದ್ದಾರೆ.

ಅದೇ ರೀತಿ ದಾವಣಗೆರೆ ಲೋಕಸಭಾ ಕ್ಷೇತ್ರದ ಮತದಾರರ ಮನದಾಳವನ್ನು ಅರಿಯದೇ ಸೋಲಿಗೆ ಕಾರಣರಾದ ನಾಯಕರುಗಳು ಮತದಾರರಲ್ಲಿ ಜಿಗುಪ್ಸೆ ಆಗುವಂತೆ ನಡೆದುಕೊಂಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಕಾರಣರಾದವರೇ ಪಕ್ಷ ಸಂಘಟನೆ ಬಗ್ಗೆ ಕಾರ್ಯಕರ್ತರಿಗೆ ಕರೆ ನೀಡುತ್ತಿರುವುದು ವಿಪರ್ಯಾಸ ಎಂದು ವ್ಯಂಗ್ಯವಾಡಿದ್ದಾರೆ.

ತಾವಿದ್ದರೆ ಮಾತ್ರ ಪಕ್ಷ, ತಮ್ಮಿಂದಲೇ ಪಕ್ಷ, ತಾವೇ ಪಕ್ಷ, ತಾವೇ ಕಟ್ಟಿ ಬೆಳೆಸಿದವರು ಎಂಬಂತೆ ಪೋಟೋಗೋ ಪೋಸ್ ನೀಡುತ್ತಿದ್ದಾರೆ. ಕಾರ್ಯಕರ್ತರಿಂದ ನಾಯಕರಾಗಿ ಬೆಳೆದು ಅಧಿಕಾರ ಅನುಭವಿಸಿ, ವೈಯಕ್ತಿಕ ತೆವಲಿಗಾಗಿ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿ, ಪಕ್ಷದ ಸೋಲಿಗೆ ಕಾರಣರಾಗಿದ್ದು, ಈ ಮೂಲಕ ಪಕ್ಷದ ಕಾರ್ಯಕರ್ತರಿಗೆ ಮೋಸ ಮಾಡಿದ್ದಾರೆ. ಒಂದು ಪಕ್ಷ ಬೆಳೆಯಬೇಕಾದರೆ ಕಾರ್ಯಕರ್ತರ ಪಾತ್ರವೇ ಮಹತ್ವದ್ದು. ಕಾರ್ಯಕರ್ತರಿದ್ದರೆ ಮಾತ್ರ ಒಬ್ಬ ನಾಯಕ ಬೆಳೆಯಲು ಸಾಧ್ಯ. ಕಾರ್ಯಕರ್ತರನ್ನು ಮರೆತು, ಪಕ್ಷ ವಿರೋಧಿ ಚಟುವಟಿಕೆ ನಡೆಸಿ ಪಕ್ಷದ ಸೋಲಿಗೆ ಕಾರಣರಾದವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಪ್ರಕಾಶ್ ಒತ್ತಾಯಿಸಿದ್ದಾರೆ.

# ಚಿತ್ರದುರ್ಗದಲ್ಲಿ ಅಯ್ಯಪ್ಪ ಸ್ವಾಮಿ ಬ್ರಹ್ಮೋತ್ಸವ

ಚಿತ್ರದುರ್ಗ, ಡಿ.1- ಮೆದೆಹಳ್ಳಿ ರಸ್ತೆಯಲ್ಲಿ ರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ 60 ದಿನಗಳ ಬ್ರಹ್ಮೋತ್ಸವವು ಆರಂಭಗೊಂಡಿದ್ದು, ಬರುವ ಜನವರಿ 13ರವರೆಗೆ ನಡೆಯಲಿದೆ. ಮಾಲಾಧಾರಿ ಗಳಿಗೆ ದೇವಸ್ಥಾನದಲ್ಲಿ ಪ್ರತಿನಿತ್ಯ ಉಚಿತ ಅನ್ನದಾನ ಕಾರ್ಯಕ್ರಮ ಜರುಗಲಿದೆ.

ಜನವರಿ 13ರ ಸೋಮವಾರ ಸಂಜೆ 6ಕ್ಕೆ ನಗರದಲ್ಲಿ ಅಯ್ಯಪ್ಪ ಸ್ವಾಮಿಯ ಆಭರಣ ಮೆರವಣಿಗೆ ಆಯೋಜಿಸಿದೆ.

ಜನವರಿ 14 ರಂದು ಮಕರ ಸಂಕ್ರಮಣದ ಅಂಗವಾಗಿ ಸ್ವಾಮಿ ಸನ್ನಿಧಿಯಲ್ಲಿ ಲಕ್ಷ ದೀಪೋತ್ಸವ ನಡೆಯಲಿದೆ.

# ದೆಹಲಿಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಇಲ್ಲ



ನವದೆಹಲಿ, ಡಿ.1- ಫೆಬ್ರವರಿಯಲ್ಲಿ ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಯನ್ನು ಆಮ್ ಆದ್ಮಿ ಪಕ್ಷದ ಸಂಚಾಲಕ, ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ತಳ್ಳಿಹಾಕಿದ್ದಾರೆ.

ದೆಹಲಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ದೆಹಲಿಯಲ್ಲಿ ತಮ್ಮ ಪಕ್ಷ ಯಾವುದೇ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಎಎಪಿ ಮತ್ತು ಕಾಂಗ್ರೆಸ್ ಪ್ರತಿಪಕ್ಷಗಳ ಮೈತ್ರಿಕೂಟ ಇಂಡಿಯಾದ ಭಾಗವಾಗಿವೆ ಮತ್ತು ಈ ವರ್ಷದ ಆರಂಭದಲ್ಲಿ ನಡೆದ ಲೋಕಸಭೆ ಚುನಾವಣೆಗೆ ದೆಹಲಿಯಲ್ಲಿ ಮೈತ್ರಿ ಮಾಡಿಕೊಂಡಿದ್ದವು. ಕಳೆದ ಅಕ್ಟೋಬರ್‌ನಲ್ಲಿ ನಡೆದ ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಹಲವು ಸುತ್ತಿನ ಮಾತುಕತೆಗಳ ಹೊರತಾಗಿಯೂ ಎಎಪಿ ಮತ್ತು ಕಾಂಗ್ರೆಸ್ ಸೀಟು ಹಂಚಿಕೆ ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ಹೀಗಾಗಿ ಎರಡೂ ಪಕ್ಷಗಳು ಪ್ರತ್ಯೇಕವಾಗಿ ಚುನಾವಣೆಗೆ ಸ್ಪರ್ಧಿಸಿದ್ದವು.

# ನಮ್ಮ ಸಾಧನೆಗಳು ಮಾತುಗಳಾಗಬೇಕು

**(1ನೇ ಪುಟದಿಂದ)** ಭಾಷೆಯನ್ನು ಪ್ರೀತಿಸುತ್ತಾ, ಉಳಿಸುತ್ತಾ ಹೋದಾಗ ಕನ್ನಡ ಶಾಲೆಗಳು ಮುಚ್ಚುವುದಿಲ್ಲ, ಭಾಷೆ ನಶಿಸಿಸುವುದಿಲ್ಲ. ಕನ್ನಡ ಭಾಷೆಗೆ ತನ್ನದೇ ಆದ ಅಸ್ತಿತ್ವ, ಮಹತ್ವ ಇದೆ. ಹೀಗಾಗಿ ಕನ್ನಡ ಭಾಷೆಯ 8 ಜನ ಮಹಾನ್ ವ್ಯಕ್ತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಬಂದಿರುವುದು ಹೆಮ್ಮೆಯ ವಿಷಯ ಎಂದರು

ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಿರಿಜಾ ಮಾಲಿ ಪಾಟೀಲ್, ಡಾ.ಸುಬ್ಬಣ್ಣ ಕರಕನಹಳ್ಳಿ, ಡಾ.ವಿ.ವಿ. ಹಿರೇಮಠ, ವೆಂಕಟೇಶ್ ಎಸ್. ಸಂಪ, ಮಲ್ಲಿಕಾರ್ಜುನ ಎಸ್., ಕೆ.ಹೆಚ್. ಮಂಜುನಾಥ್, ಹೇಮಾ ಶಾಂತಪ್ಪ ಪೂಜಾರಿ ಇತರರು ಉಪಸ್ಥಿತರಿದ್ದರು. ಶೈಲಾ ವಿನೋದ ನಿರೂಪಿಸಿದರು. ಶ್ರೀಮತಿ ಅಡಿಗ ಸ್ವಾಗತಿಸಿದರು. ಕೆ.ಸಿ. ಉಮೇಶ್ ವಂದಿಸಿದರು.

# ವಿದ್ಯಾರ್ಥಿಗಳ ತಪ್ಪು ನಿರ್ಧಾರಗಳು ಅಭಿವೃದ್ಧಿಗೆ ಮಾರಕ



**ದವನ್ ಹಾಗೂ ನೂತನ ಪದವಿ ಕಾಲೇಜುಗಳ 2024-25 ನೇ ಸಾಲಿನ ಶೈಕ್ಷಣಿಕ ವರ್ಷಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್**

ದಾವಣಗೆರೆ, ಡಿ. 1- ವಿದ್ಯಾರ್ಥಿಗಳು ಸಾಧಕ ವ್ಯಸನಿಗಳಾಗಿ, ಮಾದಕ ವ್ಯಸನಿಗಳಾಗಬೇಡಿ, ಸದಾ ಯಶಸ್ಸಿನ ಬೆನ್ನು ಹತ್ತಿ ತಮ್ಮ ವಿದ್ಯಾರ್ಥಿ ಜೀವನವನ್ನು ಸಾರ್ಥಕಪಡಿಸಿಕೊಳ್ಳಿ, ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಹೇಳಿದರು.

ನಗರದ ದವನ್ ಹಾಗೂ ನೂತನ ಪದವಿ ಕಾಲೇಜುಗಳ 2024-25 ನೇ ಸಾಲಿನ ಶೈಕ್ಷಣಿಕ ವರ್ಷಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನ ಸಾಧನೆ ಕಡೆ ಗಮನ ಹರಿಸಬೇಕು, ಇಂದಿನ ಯುವ ಪೀಳಿಗೆ ಮಾದಕ ವ್ಯಸನಿಗಳಾಗಿ, ಮೊಬೈಲ್ ವ್ಯಸನಿಗಳಾಗಿ, ಅನೇಕ ತೆರನಾದ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಗಣನೀಯವಾಗಿ ಹೆಚ್ಚುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ನಿಮ್ಮ ಭವಿಷ್ಯ ರೂಪಿಸುವ ಸಮಯ ನಿಮ್ಮ ಕೈಯಲ್ಲಿದೆ ತಂದೆ, ತಾಯಿ, ಗುರುಗಳ ಮಾರ್ಗದರ್ಶನದಂತೆ ಮುನ್ನಡೆದು ಯಶಸ್ಸು ಗಳಿಸುವ ಪ್ರಯತ್ನ ಮಾಡಿ, ವಿದ್ಯಾರ್ಥಿ ಜೀವನದ ಸುಖ, ಸಂತೋಷಗಳಿಗೆ ನೂರು ವರ್ಷದ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾರಂಭದ ಉದ್ಘಾಟಕರಾಗಿದ್ದ ಬೆಂಗಳೂರಿನ ಕ್ಯೂಸ್ಪೈಡರ್ಸ್ ಮತ್ತು ಜೇಸ್ಪೈಡರ್ಸ್ ಕಂಪನಿಯ ಉಪಾಧ್ಯಕ್ಷ ಎಸ್. ರವೀಶ್ ಮಾತನಾಡುತ್ತಾ, ವಿದ್ಯಾರ್ಥಿಗಳು ಪಠ್ಯಕ್ಕೆ ಸೀಮಿತವಾಗದೇ ಕೌಶಲ್ಯ ಅಭಿವೃದ್ಧಿ ಕಡೆಗೆ ಒತ್ತು ನೀಡಬೇಕೆಂದು ಕರೆ ನೀಡಿದರು. ವೃತ್ತಿಪರ ಶಿಕ್ಷಣ ಕೊಡುವ ವ್ಯವಸ್ಥೆ ಕೇವಲ ಮಹಾನಗರಗಳಿಗೆ ಸೀಮಿತವಾಗಿತ್ತು.

ಆದರೆ ದವನ್ ಹಾಗೂ ನೂತನ ಕಾಲೇಜುಗಳು ಮತ್ತು ಕ್ಯೂಸ್ಪೈಡರ್ಸ್ ಕಂಪನಿಗಳ ಜೊತೆಗಿನ ಒಡಂಬಡಿಕೆಯಿಂದ ಮಧ್ಯ ಕರ್ನಾಟಕದ ವಿದ್ಯಾರ್ಥಿಗಳಿಗೆ ನಗರದಲ್ಲಿಯೇ ವೃತ್ತಿಪರ ಶಿಕ್ಷಣದ ತರಬೇತಿ ದೊರೆಯುವಂತಾಗಿದೆ. ಇತ್ತೀಚೆಗೆ ಸದರಿ ಕಾಲೇಜುಗಳ 30 ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದ ಮೂಲಕ ವೃತ್ತಿಪರ ಉಚಿತ ಶಿಕ್ಷಣ ತರಬೇತಿಗೆ ಆಯ್ಕೆಯಾಗಿರುತ್ತಾರೆ. ಈಗಾಗಲೇ ಕೆಲ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳೂ ಸಹ ಲಭಿಸಿರುತ್ತವೆ ಎಂದು ಹೇಳಿದರು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ವೀರೇಶ್ ಪಟೇಲ್ ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಪ್ರತಿಭಾ ಪುರಸ್ಕಾರ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಮುಂದಿನ ವರ್ಷಗಳಲ್ಲಿ ದ್ವಿಗಣಗೊಳ್ಳಲಿ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ದೇಶದ ಮೂಲೆ ಮೂಲೆಯಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಲಿ, ತಂದೆ-ತಾಯಿಗಳಿಗೆ ಹಾಗೂ ವಿದ್ಯಾಸಂಸ್ಥೆಗೆ ಕೀರ್ತಿ ತರಲಿ ಎಂದು ಆಶಿಸಿದರು.

ಕಾಲೇಜಿನ ಅಧ್ಯಕ್ಷ ಎನ್. ಪರಶುರಾಮನಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಸಂಸ್ಥೆಯಿಂದ ಕೊಡಮಾಡುವ ಪ್ರತಿಭಾ ಪುರಸ್ಕಾರ ನಿಮ್ಮ ಸಾಧನೆ ಮತ್ತು ಪ್ರೋತ್ಸಾಹಕ್ಕೆ ಬೆಂಬಲವಾಗಿದೆ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಗಣ್ಯರನ್ನು ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು ಸ್ವಾಗತಿಸಿದರು.

ದವನ್ ವಿದ್ಯಾ ಸಂಸ್ಥೆಯ ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಶ್ರಮವನ್ನು ಪ್ರಶಂಸಿಸಿ, ಇತರೆ ವಿದ್ಯಾರ್ಥಿಗಳು ಇದರಿಂದ ಪ್ರೇರಿತರಾಗಬೇಕೆಂದು ಕರೆ ನೀಡಿದರು.

ಟ್ರೈನಿಂಗ್ ಹಾಗೂ ಪ್ಲೇಸ್‌ಮೆಂಟ್ ವಿಭಾಗದ ಡೀನ್ ಡಾ. ಆರ್.ಎಲ್. ನಂದೀಶ್ವರ್, ಉಪ ಪ್ರಾಚಾರ್ಯರಾದ ಪ್ರೊ. ಅನಿತಾ, ವಿಭಾಗಗಳ ಮುಖ್ಯಸ್ಥರಾದ ಪ್ರೊ. ಬಿ.ಸಿ. ಶಂಕರ್, ಪ್ರೊ. ಜಿ.ಬಿ. ಚಂದನ್ ಉಪಸ್ಥಿತರಿದ್ದರು. ಪ್ರೊ. ಟಿ. ಅಲ್ಮಾಸ್ ಬಾನು, ಪ್ರೊ. ಆರ್.ವೈ. ಶಿಲ್ಪ ಅತಿಥಿಗಳನ್ನು ಪರಿಚಯಿಸಿದರು. ಪ್ರೊ. ಎಂ. ಸ್ಮಿತಾ ವಂದಿಸಿದರು.

# ಸೇಂಟ್‌ಜಾನ್ಸ್‌ನಲ್ಲಿ ಕಾನೂನು ಅರಿವು-ನೆರವು ಸಪ್ತಾಹ



ದಾವಣಗೆರೆ, ಡಿ. 1- ನಗರದ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಸಂವಿಧಾನ ದಿನದ ಅಂಗವಾಗಿ ಮಕ್ಕಳಿಗಾಗಿ ಕಾನೂನು ಅರಿವು-ನೆರವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ಗೌರವಾನ್ವಿತ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಜಿ.ಸಿ. ಪ್ರಶಾಂತ್ ಮಕ್ಕಳನ್ನುದ್ದೇಶಿಸಿ ಕಾನೂನು ಸಲಹೆ ನೀಡುತ್ತಾ, ಇಂದು ಹೆಚ್ಚುತ್ತಿರುವ ಸೈಬರ್ ಅಪರಾಧದ ಬಗ್ಗೆ ಜಾಗೃತಿ ಮೂಡಿಸಿದರು.

ಸಲಹೆಗಾರರಾಗಿ ಆಗಮಿಸಿದ್ದ ಶ್ರೀಮತಿ ಮಹಾದೇವಿ ಹಿರೇಮಠ ಅವರು ಮಾತನಾಡಿ, ಮಕ್ಕಳಿಗೆ ಕಾನೂನು ನಿಮ್ಮ ತಾಯಿಯ ಗರ್ಭದಿಂದ ಸಾಯುವವರೆಗೂ ಇರುತ್ತದೆ ಎಂದು ಹೇಳುತ್ತಾ ಇಂದು ಹೆಚ್ಚುತ್ತಿರುವ ಬಾಲಾಪರಾಧಗಳ ಬಗ್ಗೆ ತಿಳುವಳಿಕೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ರಕ್ಷಣಾಧಿಕಾರಿ ಶ್ರೀಮತಿ ಪ್ರತಿಭಾ ಮಾತನಾಡಿ, ಮಕ್ಕಳಿಗೆ ಯಾರಿಂದಲಾದರೂ ತೊಂದರೆಗಳುಂಟಾದಲ್ಲಿ ತಕ್ಷಣ ನಮ್ಮ ಕಛೇರಿಗೆ ಬಂದು ಮಾಹಿತಿ ನೀಡಲು ತಿಳಿಸಿದರಲ್ಲದೆ ಬಾಲ್ಯ ವಿವಾಹ ನಿಷೇಧದ ಬಗ್ಗೆಯೂ ಮಾಹಿತಿಯನ್ನು ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಸಯ್ಯದ್ ಆರಿಫ್ ಆರ್. ಮಾತನಾಡಿ, ಭಾರತದ ನ್ಯಾಯಾಂಗ ವ್ಯವಸ್ಥೆಯ ಮಹತ್ವ ಮತ್ತು ಪಾರದರ್ಶಕತೆಯನ್ನು ಕುರಿತು ತಿಳಿಸುತ್ತಾ ಕಾನೂನೇ ನಮ್ಮ ಉಸಿರು ಎಂದು ಕಾನೂನಿನ ಮಹತ್ವವನ್ನು ತಿಳಿಸಿದರು.

ಕ್ಷೇತ್ರ ಸಂಪನ್ಮೂಲಾಧಿಕಾರಿ ರಮೇಶ್, ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್, ಕಾರ್ಯದರ್ಶಿ ಉಮಾಪತಯ್ಯ ಹಾಗೂ ಖಜಾಂಚಿ ಪ್ರವೀಣ್ ಹುಲ್ಲುಮನೆ ಉಪಸ್ಥಿತರಿದ್ದರು. ಪ್ರಾಂಶುಪಾಲ ಸಯ್ಯದ್ ಆರ್. ಆರಿಫ್, ಮತ್ತು ಶ್ರೀಮತಿ ಪ್ರೀತಾ ಟಿ. ರೈ, ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಎಸ್.ಎಂ. ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕನ್ನಡ ಸಾರಸ್ವತ ಲೋಕಕ್ಕೆ ಕೃಷ್ಣಶರ್ಮರ ಶ್ರೇಷ್ಠ ಕೃತಿಗಳು

**(1ನೇ ಪುಟದಿಂದ)** ಬರಹಗಳ ಮೂಲಕ ಬದುಕಿನ ನಿಜವಾದ ಅನುಭೂತಿಯನ್ನು ದಾಖಲಿಸಿ ಹೋಗಿದ್ದಾರೆ. ಅದನ್ನು ಮರೆತರೆ ನಾವು ಕ್ಷಣಿಕ ತೃಪ್ತಿಯಲ್ಲೇ ಅಸುನೀಗುತ್ತೇವೆ. ಆದರೆ ಹಾಗಾಗದೆ ನಿತ್ಯದ ಸುಖದ ಅನುಭೂತಿಯನ್ನು ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸಲು ಈ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕಮಲ ಸೊಪ್ಪಿನ್ ಮಾತನಾಡಿ, ನಮ್ಮ ವಿದ್ಯಾರ್ಥಿನಿಯರಿಗೆ ಇಂದಿನ ಕಾರ್ಯಕ್ರಮದಿಂದ ಬದುಕಿನ ಸುಖದ ಕ್ಷಣಗಳು ಎಲ್ಲಿವೆ ಎಂದು ಅರಿವಾಗಿದೆ. ಸಾಹಿತ್ಯ ಯಾವಾಗಲೂ ಬದುಕಿನ ಅನುಭವದಿಂದ ಕೂಡಿರುವಂತಹದ್ದು. ಅಂತಹ ಸಾಹಿತ್ಯದ ಅಧ್ಯಯನವೂ ನಮಗೆ ಅನೇಕ ಕಷ್ಟಕರ ಸಂದರ್ಭದಲ್ಲಿ ಧೈರ್ಯವನ್ನು ನೀಡುತ್ತವೆ ಎಂದರು. ವೇದಿಕೆ ಕಾರ್ಯಕ್ರಮ ಮುಗಿದ ನಂತರ ಆನಂದಕಂದ ಗೆಳೆಯರ ಬಳಗ, ಧಾರವಾಡ ತಂಡದವರು ಆನಂದಕಂದರ ನಲ್ವಾಡುಗಳನ್ನು ಗಾಯನ ಮಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಆರ್.ಜಿ. ಕವಿತ, ಡಾ. ಎಚ್.ಎಂ. ಲೋಹಿತ್, ಅನಂತಕುಮಾರ್ ಜಿ.ಎಸ್., ಕಾಳಾಚಾರ್ ಕೆ.ಪಿ. ಇದ್ದರು

ಕು. ಪಲ್ಲವಿ ಎಸ್.ಜಿ ಸ್ವಾಗತಿಸಿದರು. ಕು. ರೇಖಾ ಎಂ.ಪಿ. ಮತ್ತು ಕು. ಮಲ್ಲಿಕಾ ಎಂ. ನಿರೂಪಿಸಿದರು. ಕು. ಸಿ. ವಿದ್ಯಾ ವಂದಿಸಿದರು.

# ಆರ್.ವಿ.ಜಿ.ಕೆ.ಯಲ್ಲಿ ತಾ।। ಕಸಾಪದಿಂದ ರಾಜ್ಯೋತ್ಸವ



ದಾವಣಗೆರೆ, ಡಿ.1- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ನಗರದ ಆರ್.ವಿ.ಜಿ.ಕೆ. ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆಸಲಾಯಿತು.

ಪ್ರೌಢಶಾಲೆ ಮುಖ್ಯೋಪಾಧ್ಯಾಯ ನಿರಂಜನ್ ಕೆ.ಸಿ. ಅಧ್ಯಕ್ಷತೆ ವಹಿಸಿದ್ದರು. ಆರ್.ವಿ.ಜಿ.ಕೆ. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ಸಸಿಗೆ ನೀರು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕನ್ನಡ ನಾಡು-ನುಡಿ ವೈಶಿಷ್ಟ್ಯ ಮತ್ತು ಕನ್ನಡ ರಾಜ್ಯೋತ್ಸವ ಕುರಿತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸುಮತಿ ಜಯಪ್ಪ ವಿದ್ಯಾರ್ಥಿ ಗಳಿಗೆ ದತ್ತಿ ಉಪನ್ಯಾಸ ನೀಡಿದರು.

ಕನ್ನಡ ಭಾಷೆ ಅತ್ಯಂತ ಪ್ರಾಚೀನ ಭಾಷೆಯಾಗಿದ್ದು, ಇಂದು ಹಲವಾರು ಸಮಸ್ಯೆ ಹಾಗೂ ಸವಾಲುಗಳನ್ನೂ ಎದುರಿಸುತ್ತಿದೆ. ಅವೆಲ್ಲವುಗಳನ್ನೂ ಮೆಟ್ಟಿನಿಂತು ಗಟ್ಟಿಗೊಳ್ಳುವ ಶಕ್ತಿ ಕನ್ನಡಕ್ಕಿದೆ. ಅದಕ್ಕಾಗಿ ನಾವೆಲ್ಲರೂ ಕಂಕಣಬದ್ಧರಾಗಬೇಕಾಗಿದೆ. ಮಕ್ಕಳು ಮನೆಯಲ್ಲಿ, ಶಾಲೆಯಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡವನ್ನೇ ಹೆಚ್ಚು ಬಳಸಬೇಕು.

ಬಳಸಿದಷ್ಟು ಕನ್ನಡ ಭಾಷೆ ಬೆಳೆಯುತ್ತದೆ. ಬಳಸದಿರುವ ಭಾಷೆ ನಾಶವಾಗುತ್ತದೆ ಎಂದು ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಸವಿವರವಾಗಿ ತಿಳಿಸಿದರು. ಕನ್ನಡ ಭಾಷೆಯ ಸಿರಿವಂತಿಕೆ, ಕನ್ನಡ ನಾಡಿನ ಸಾಂಸ್ಕೃತಿಕ ಭವ್ಯ ಪರಂಪರೆ, ಪ್ರಾಕೃತಿಕ ಸಂಪತ್ತು, ಶಿಲ್ಪಕಲೆಯ ವೈಭವ, ಅಪಾರ ಸಾಹಿತ್ಯ ರಾಶಿಯಿಂದ ಇಡೀ ಜಗತ್ತಿನ ಕಣ್ಣನ್ನೇ ತನ್ನತ್ತ ಸೆಳೆಯುತ್ತಿರುವ ಕರ್ನಾಟಕದ ಭವ್ಯತೆ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುತ್ತಾ, ನಾವು ಕೇವಲ ನವೆಂಬರ್ ಕನ್ನಡಿಗರಾಗದೇ ನಂಬರ್ ಒನ್ ಕನ್ನಡಿಗರಾಗೋಣ. ಕನ್ನಡ ಕೇವಲ ನಮ್ಮ ಕೊರಳಿನ ಭಾಷೆಯಾಗದೆ ಕರುಳಿನ ಭಾಷೆಯಾಗಲಿ ಎಂದು ಶುಭ ಹಾರೈಸಿದರು.

ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಯಲ್ಲಿ ದತ್ತಿದಾನಿಗಳನ್ನು ಸ್ಮರಿಸಿ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯನ್ನು ತಿಳಿಸಿದರು. ಮುಖ್ಯ ಅತಿಥಿಗಳಾಗಿ ವಾಸವಿ ಶಾಲೆಯ ಅಧ್ಯಕ್ಷರಾದ ಆರ್.ಎಲ್. ಪ್ರಭಾಕರ್ ಹಾಗೂ ತಾಲ್ಲೂಕು ಕಸಾಪ ನಿರ್ದೇಶಕರಾದ ಕೆ.ಜಿ. ಸೌಭಾಗ್ಯಮ್ಮ ಈ ಸಂದರ್ಭದಲ್ಲಿ ಮಾತನಾಡಿದರು.

10ನೇ ತರಗತಿ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕ ವಿಶ್ವನಾಥ್ ಕೆ.ಪಿ. ಸ್ವಾಗತಿಸಿದರು. ಶಿಕ್ಷಕ ಕೊಟ್ರೇಶ್ ನಿರೂಪಿಸಿದರು. ಶಿಕ್ಷಕ ಪ್ರದೀಪ್ ಹೆಚ್. ವಂದಿಸಿದರು.

## 15ರಂದು ಕೃಷಿಕ ಸಮಾಜದ ಚುನಾವಣೆ

ದಾವಣಗೆರೆ, ಡಿ.1 -ಜಿಲ್ಲೆಯ ವಿವಿಧ ತಾಲ್ಲೂಕುಗಳ ಕೃಷಿಕ ಸಮಾಜದ ಚುನಾವಣೆಯು ದಿನಾಂಕ 15 ರಂದು ನಡೆಯಲಿದೆ. ಚುನಾವಣಾ ಪ್ರಕ್ರಿಯೆಯನ್ನು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ದಾವಣಗೆರೆ, ಹರಿಹರ, ಜಗಳೂರು, ಚನ್ನಗಿರಿ, ಹೊನ್ನಾಳಿ ಹಾಗೂ ರೈತ ಸಂಪರ್ಕ ಕೇಂದ್ರ, ನ್ಯಾಮತಿ ಈ ಸ್ಥಳಗಳಲ್ಲಿ ನಿಗದಿಪಡಿಸಲಾಗಿದೆ.


**ಕಣ್ಣಿನ ಉಚಿತ ತಪಾಸಣೆ**

**ಡಾ।। ಕಾಕಡೆ,** ಕಣ್ಣಿನ ತಜ್ಞರು

ಪ್ರತಿ ಸೋಮವಾರ ಮಾತ್ರ ಬೆಳಿಗ್ಗೆ 11 ರಿಂದ 1 ಗಂಟೆಯವರೆಗೆ



• ಸೌತ್ ಇಂಡಿಯಾ ಆಪ್ಟಿಕಲ್ಸ್

ಬ್ಯಾಂಕ್ ಆಫ್ ಬರೋಡಾ ಹತ್ತಿರ, ರಾಂ ಅಂಡ್ ಕೋ ಸರ್ಕಲ್, ಪಿ.ಜೆ. ಬಡಾವಣೆ, ದಾವಣಗೆರೆ

ಉಚಿತ ತಪಾಸಣೆ ಮತ್ತು ನೋಂದಣಿಗಾಗಿ ಕರೆ ಮಾಡಿ. : 08192 231432



**ಕರೇಗೌಡ್ರ ಟಿ.ಎಸ್. ನಾಗರಾಜ್ ಅವರಿಗೆ ಅಭಿನಂದನೆಗಳು**



ಸಮಾಜ ಸೇವೆಗಾಗಿ ದಾವಣಗೆರೆ ಮಹಾನಗರ ಪಾಲಿಕೆ
ಜಿಲ್ಲಾ ಪತ್ರಕರ್ತರ ಸಂಘ ಹಾಗೂ
ವಿವಿಧ ಕನ್ನಡಪರ ಸಂಘಟನೆಗಳ ವತಿಯಿಂದ ನಡೆದ
69ನೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ
ಹಿರಿಯ ಕಾರ್ಮಿಕ ಮುಖಂಡರು,
ರೈತ ಹೋರಾಟಗಾರರು, ಕಾಮ್ರೆಡ್ ಸುರೇಶ್,
ಕಾಮ್ರೆಡ್ ಶೇಖರಪ್ಪ, ಕಾಮ್ರೆಡ್ ಪಂಪಾಪತಿ
ರೈತ ಕಾರ್ಮಿಕರ ಕಲ್ಯಾಣಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾದ
**ಕರೇಗೌಡ್ರ ಟಿ.ಎಸ್. ನಾಗರಾಜ್**
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಶುಭ ಕೋರುವವರು :

**ಶ್ರೀ ಎಂ.ಎಸ್. ನಾಗರಾಜಪ್ಪ** ಅಧ್ಯಕ್ಷರು, ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆ, ಮೆಳ್ಳೇಕಟ್ಟೆ

**ಶ್ರೀ ಬಿ.ಎಂ. ಹನುಮಂತಪ್ಪ** ವಕೀಲರು ಹಾಗೂ ದಲಿತ ಮುಖಂಡರು

**ಶ್ರೀ ಕೆ.ಜಿ. ಶಿವಕುಮಾರ್** ಮಾಜಿ ನಗರ ಸಭಾ ಅಧ್ಯಕ್ಷರು, ದಾವಣಗೆರೆ

**ಶ್ರೀ ಎಲ್.ಹೆಚ್. ಅರುಣ್‌ಕುಮಾರ್** ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ

**ಶ್ರೀ ಯೋಗೇಶ್ವರಪ್ಪ ಆರ್.** ವಕೀಲರು ಹಾಗೂ ಉಪಾಧ್ಯಕ್ಷರು ರಾಜ್ಯ ಅಧಿವಕ್ತ ಪರಿಷತ್

**ಶ್ರೀ ಕುಮಾರ ಆನೆಕೊಂಡ** ಹಿರಿಯ ಪತ್ರಕರ್ತರು, ದಾವಣಗೆರೆ

**ಕರೇಗೌಡ್ರ ಟಿ.ಎನ್. ಮಂಜುನಾಥ್** ದಾವಣಗೆರೆ

**ಶ್ರೀ ರುದ್ರಮೂರ್ತಿ** ಹೊಳೆಸಿರಿಗೆರೆ

**ಶ್ರೀ ಕೆ.ಸಿ. ಪ್ರಕಾಶ್** ಆಶ್ರಯ ಸಮಿತಿ ಸದಸ್ಯರು

**ಶ್ರೀ ಎನ್.ಎಸ್. ರಾಜು** ಅಧ್ಯಕ್ಷರು, ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ, ದಾವಣಗೆರೆ

**ಶ್ರೀ ಅರುಣ್ ಕುಮಾರ್ ಕುರುಡಿ** ರಾಜ್ಯ ರೈತ ಮುಖಂಡರು, ದಾವಣಗೆರೆ

**ಟಿ.ಎಸ್. ನಾಗರಾಜ್ ಅಭಿಮಾನಿ ವರ್ಗ, ದಾವಣಗೆರೆ**


# ಭಯೋತ್ಪಾದಕ ಚಟುವಟಿಕೆ ತಡೆಯಲು

## ಜಮ್ಮುವಿನಲ್ಲಿ ಎರಡು ತುಕಡಿ ನಿಯೋಜನೆ

ನವದೆಹಲಿ, ಡಿ.1- ಪಾಕಿಸ್ತಾನದ ಕಡೆಯಿಂದ ಉಗ್ರರ ಒಳನುಸುಳುವಿಕೆ ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯಲು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಇನ್ನೂ ಎರಡು ತುಕಡಿಗಳನ್ನು ಜಮ್ಮು ಪ್ರದೇಶದಲ್ಲಿ ನಿಯೋಜಿಸಲಾಗಿದೆ.

ಪಾಕಿಸ್ತಾನದ ಕಡೆಯಿಂದ ಭಾರತಕ್ಕೆ ಒಳನುಸುಳುವವರನ್ನು ತಡೆಯುವುದು ಸವಾಲಿನ ಕೆಲಸವಾಗಿದ್ದು, ಚಳಿಗಾಲಕ್ಕೂ ಮುನ್ನ ಗಡಿಯನ್ನು ಭದ್ರಪಡಿಸುವ ಉದ್ದೇಶದಿಂದ ಸೇನೆಯು ಈ ನಿರ್ಧಾರ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ. ಈಚೆಗೆ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ. ಈ ಹಿಂದೆ ಒಡಿಶಾದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸುತ್ತಿದ್ದ ಎರಡು ತುಕಡಿಗಳನ್ನು ಜುಲೈ ಮತ್ತು ಆಗಸ್ಟ್‌ನಲ್ಲಿ ವಾಪಸ್ ಕರೆಸಿಕೊಳ್ಳಲಾಗಿತ್ತು. ಈಗ ಅವನ್ನು ಜಮ್ಮುವಿಗೆ ಕಳುಹಿಸಲಾಗಿದೆ.

ಸಾಂಬಾ, ಜಮ್ಮು ಮತ್ತು ಪಂಜಾಬ್ ಗಡಿ ಪ್ರದೇಶಗಳಲ್ಲಿ ನೂತನ ತುಕಡಿಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅವರಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಿದ್ದು, ತಾತ್ಕಾಲಿಕ ಮತ್ತು ಶಾಶ್ವತ ನೆಲೆ, ಗಸ್ತು ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿವೆ.

ಜಮ್ಮುವಿನಲ್ಲಿ ಈ ವರ್ಷ ನಡೆದ ಸರಣಿ ಭಯೋತ್ಪಾದಕ ದಾಳಿಗಳಲ್ಲಿ 40ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಸೇನೆಯು ಹಲವು ಉಗ್ರರನ್ನು ಹತ್ಯೆಗೈದಿದೆ.


ssims SPARSH
CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 5ನೇ ಡಿಸೆಂಬರ್ 2024 | ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

## ನಗರದಲ್ಲಿ ಇಂದು ಪದ್ಮಶಾಲಿ ಸಮಾಜದ ಸಭೆ

ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಿಗ್ಗೆ 11.30 ಗಂಟೆಗೆ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜದ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಹಂಗಾಮಿ ಅಧ್ಯಕ್ಷ ಪೆದ್ದಿಪದ್ದಿ ಕಿರಣ್ ತಿಳಿಸಿದ್ದಾರೆ.

## ಶಂಕರಾಚಾರ್ಯ ಕೂಡಲಿ ಶೃಂಗೇರಿ ಶ್ರೀ ವರ್ಧಂತ್ಯುತ್ಸವ

ಹೊಳೆ ಹೊನ್ನೂರು ಸಮೀಪದಲ್ಲಿರುವ ತುಂಗಾ ಮತ್ತು ಭದ್ರಾ ನದಿಗಳ ಸಂಗಮ ಸ್ಥಳವಾದ ಪುರಾಣ ಪ್ರಸಿದ್ಧ ಕೂಡಲಿ ಮಹಾಕ್ಷೇತ್ರದಲ್ಲಿರುವ ಶ್ರೀಮದ್ ಜಗದ್ಗುರು ಕೂಡಲಿ ಶೃಂಗೇರಿ ಶಂಕರಾಚಾರ್ಯ ಮಹಾ ಸಂಸ್ಥಾನದ ಹಿರಿಯ ಪೀಠಾಧಿಪತಿ ಶ್ರೀಮದ್ ಜಗದ್ಗುರು ವಿದ್ಯಾಭಿನವ ವಿದ್ಯಾರಣ್ಯ ಭಾರತಿ ಮಹಾ ಸ್ವಾಮಿಗಳವರ ವರ್ಧಂತ್ಯುತ್ಸವ (ಜನ್ಮ ದಿನೋತ್ಸವ) ವನ್ನು ಇಂದು ಜಯದೇವ ವೃತ್ತದಲ್ಲಿರುವ ಶಂಕರ ಮಠದಲ್ಲಿ ಏರ್ಪಡಿಸಲಾಗಿದೆ.



## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಕಾರ್ತಿಕ

ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಸಂಜೆ 5 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿ ಗಳು ಹಾಗೂ ಡಾ. ಕಲ್ಲಯ್ಯಜ್ಜನವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.


ಡಾ. ಶಾಮನೂರು ಶಿವಶಂಕರಪ್ಪ, ಡಾ. ಅಥಣಿ ಎಸ್.ವೀರಣ್ಣ, ನಲ್ಕುದುರೆಯ ಶ್ರೀಮತಿ ಶಶಿಕಲಾ ಮೂರ್ತಿ, ಎಸ್.ಕೆ. ವೀರಣ್ಣ, ಜೆ.ಎನ್. ಕರಿಬಸಪ್ಪ, ದೇವರಮನೆ ಶಿವಕುಮಾರ್, ಜಿ.ಹೆಚ್. ಯಲ್ಲಪ್ಪ, ಎ.ಹೆಚ್. ಸಿದ್ದಲಿಂಗಸ್ವಾಮಿ ಭಾಗವಹಿಸಲಿದ್ದಾರೆ ಎಂದು ಸಮಿತಿಯ ಕಾರ್ಯದರ್ಶಿ ಕರಿಬಸಪ್ಪ ತಿಳಿಸಿದ್ದಾರೆ.

## ನಗರಕ್ಕೆ ಇಂದು ಮೂಳೆ ವೈದ್ಯರ ಭೇಟಿ

ರಾಮನ ಗರ ಜಿಲ್ಲೆಯ ಕುದೂರಿನ ಪಾರಂಪರಿಕ ಮೂಳೆ ವೈದ್ಯ ಮಹದೇವಯ್ಯ ಅವರು ನಿಟು ವಳ್ಳಿಯ ಪತಂಜಲಿ ವೆಲ್‌ನೆಸ್ ಸೆಂಟರ್‌ನಲ್ಲಿ ಮಧ್ಯಾಹ್ನ 1 ಗಂಟೆಗೆ ಚಿಕಿತ್ಸೆ ನೀಡಲಿದ್ದಾರೆ. ಮೂಳೆ ಮುರಿತ, ಟೆನಿಸ್ ಎಲ್ಬೋ ಮುಂತಾದ ಸಮಸ್ಯೆಗಳಿಗೆ ಅವರು ಚಿಕಿತ್ಸೆ ನೀಡಲು ಎಂದು ಕೆ.ಎಂ. ಪುಷ್ಪಲತಾ (9743895325, 83107 48946) ತಿಳಿಸಿದ್ದಾರೆ.

## ಜವಾಬ್ದಾರಿ ವಹಿಸಿಕೊಂಡ ಜಯ್ ಶಾ

(1ನೇ ಪುಟದಿಂದ )ಬಳಸಿಕೊಳ್ಳಲು ಮತ್ತು ಆಟವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಐಸಿಸಿ ತರಾಡ ಮತ್ತು ಸದಸ್ಯ ರಾಷ್ಟ್ರಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ ಎಂದರು.



### ನಾಯಿ ಕಳೆದಿದೆ

**Krispy** (ಕ್ರಿಸ್ಪಿ) ಎಂಬ ಗೋಲ್ಡನ್ ರಿಟ್ರೀವರ್ ನಾಯಿ ಬಸವೇಶ್ವರ ಬಡಾವಣೆಯ ಬಾಲಾಜಿ ಸರ್ಕಲ್, ರಿಂಗ್ ರೋಡ್ ನಿಂದ ಸಂಜೆ 6.30ಕ್ಕೆ ಕಾಣೆಯಾಗಿದೆ. ಯಾರಿಗಾದರೂ ಕಂಡುಬಂದಲ್ಲಿ ತಕ್ಷಣ ಸಂಪರ್ಕಿಸಿ. 8892469449, 9448667181


10ನೇ ವರ್ಷಕ್ಕೆ ಪಾದಾರ್ಪಣೆ

Moto Service Zone

ಮೋಟೋ ಸರ್ವೀಸ್ ಝೋನ್

ವಿನಾಯಕ ನಗರ, ರಿಂಗ್ ರಸ್ತೆ, ಸಂಗೊಳ್ಳಿ ರಾಯಣ್ಣ ಪ್ರತಿಮೆಯ ಹತ್ತಿರ, ದಾವಣಗೆರೆ.

(ಹೋಂಡಾ ಮತ್ತು ಹೀರೋ ವಾಹನಗಳ ಸರ್ವೀಸ್ ಸೆಂಟರ್)



ನಮ್ಮ ಸಂಸ್ಥೆ ಒಂಭತ್ತು ವರ್ಷಗಳನ್ನು ಪೂರೈಸಿ, ಇಂದಿಗೆ ಯಶಸ್ವೀ ಹತ್ತನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಸಹಕರಿಸಿ, ಪ್ರೋತ್ಸಾಹಿಸಿದ ಎಲ್ಲಾ ಗ್ರಾಹಕರಿಗೂ, ಸ್ನೇಹಿತರಿಗೂ, ಹಿತೈಷಿಗಳಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ನಮ್ಮ ಹೃದಯ ತುಂಬಿದ ಕೃತಜ್ಞತೆಗಳು.

ಬಿ. ಗಿರೀಶ್ 9686336044



ಗಣೇಶ್ 9964613441



ssims SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕನಲ್ಲಿ ಲಭ್ಯರಿರುತ್ತಾರೆ

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist

ಇದಕ್ಕಾಗಿ ಸಮಾಲೋಚಿಸಿ:
- ಗರ್ಭಾವಸ್ಥೆಯ ಮಧುಮೇಹ
- ಥೈರೊಯ್ಡ್ ಸಮಸ್ಯೆಗಳು
- ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
- ಹೃದ್ರೋಗಿಗಳಲ್ಲಿ ಮಧುಮೇಹ
- ನರಮಂಡದ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು

ದಿನಾಂಕ: ಗುರುವಾರ, 5ನೇ ಡಿಸೆಂಬರ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


# ಹೃತ್ಪೂರ್ವಕ ಅಭಿನಂದನೆಗಳು



Er.Ravindrababu





Ar.Harsha



ಕೊಟ್ಟೂರು, ವಿಜಯನಗರ ಜಿಲ್ಲೆ



ರಾಣೇಬೆನ್ನೂರು, ಹಾವೇರಿ ಜಿಲ್ಲೆ.

ದಿನಾಂಕ 29.11.2024ರಂದು ದಾವಣಗೆರೆಯಲ್ಲಿ ಜರುಗಿದ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ (ICI) ಮತ್ತು ಅಲ್ಟ್ರಾ ಟೆಕ್ ವತಿಯಿಂದ ನೀಡಲಾಗುವ 2024ನೇ ಸಾಲಿನ ಐದನೇ ಬಾರಿಗೆ

**ಅತ್ಯುತ್ತಮ ಗೃಹ ನಿರ್ಮಾಣ ಪ್ರಶಸ್ತಿ**

ಪುರಸ್ಕಾರಕ್ಕೆ ಪಾತ್ರರಾದ

**Er. ಶ್ರೀ ರವೀಂದ್ರ ಬಾಬು ಕೆ.ಹೆಚ್.**

ಸಿವಿಲ್ ಇಂಜಿನಿಯರ್, ಮಹಾಲಕ್ಷ್ಮಿ ಕನ್‌ಸ್ಟ್ರಕ್ಷನ್ಸ್, ದಾವಣಗೆರೆ ಮತ್ತು

**Ar. ಶ್ರೀ ಹರ್ಷ ಕೆ.** ಡಿಸೈನ್ ಮೇಕರ್, ಬೆಂಗಳೂರು

ಇವರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

ಇಂಜಿನಿಯರ್‌ಗಳಾದ ನೌಷಾದ್ ಖಾನ್, ಗಣೇಶ್, ಮಂಜುನಾಥ್, ರಾಜು ಎನ್.,ವೀರೇಶ್,.ಸದಾಶಿವ್ ಆರ್ಕಿಟೆಕ್ಟ್ ಇವರಿಗೂ ಅಭಿನಂದನೆಗಳು.


TATA TISCON JOY OF BUILDING

ಬಾಲಾಜಿ ಎಂಟರ್‌ಪ್ರೈಸಸ್

ಟಾಟಾ ಟಿಸ್ಕಾನ್ ಹೋಲ್ ಸೇಲ್ ಡೀಲರ್

ಇಂಡಸ್ಟ್ರೀಯಲ್ ಏರಿಯಾ, ರವೀಂದ್ರನಾಥ್ ಬಡಾವಣೆ, ಲೋಕಿಕೆರೆ ರಸ್ತೆ, ದಾವಣಗೆರೆ.

ಶ್ರೀನಿವಾಸ್, ಮೊ: 9738109032


# ಪ್ರೊ. ಕೆ.ಸಿ. ಚಂದ್ರಪ್ಪ ನಿಧನ




ದಾವಣಗೆರೆ ತರಳಬಾಳು ಬಡಾವಣೆ 1ನೇ ಮೇನ್, 13ನೇ ಅಡ್ಡ ರಸ್ತೆ ವಾಸಿ ಸಿರಿಗೆರೆ ವಿದ್ಯಾಸಂಸ್ಥೆ ನಿವೃತ್ತ ಪ್ರಾಧ್ಯಾಪಕರಾಗಿದ್ದ

## ಪ್ರೊ. ಕೆ.ಸಿ. ಚಂದ್ರಪ್ಪ

ಅವರು ದಿನಾಂಕ 01.12.2024ರಂದು ಭಾನುವಾರ ಮಧ್ಯಾಹ್ನ 12.29ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 2.12.2024ರಂದು ಸೋಮವಾರ ಮಧ್ಯಾಹ್ನ 12.30ಕ್ಕೆ ಭದ್ರಾವತಿ ತಾಲ್ಲೂಕು ಅರಕೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು.

**: ದುಃಖತಪ್ತ ಕುಟುಂಬ ವರ್ಗ :**

ಶ್ರೀಮತಿ ಅನಸೂಯಮ್ಮ
ರೂಪಶ್ರೀ ಕೆ.ಸಿ. ಮತ್ತು ಗಿರೀಶ್ ಹೆಚ್.ಸಿ.
ಡಾ. ಮಧುಚಂದ್ರ ಕೆ. ಮತ್ತು ಅನುಷ, ರವಿಚಂದ್ರ ಮತ್ತು ಶ್ವೇತಾ,
ಮೊಮ್ಮಕ್ಕಳು, ಕಲ್ಲಾಪುರದ ವಂಶಸ್ಥರು, ಅರಕೆರೆ ಮತ್ತು
ಹುಚ್ಚಪ್ಪರ ವಂಶಸ್ಥರು, ಶಿವಪುರ ಹಾಗೂ ಬಂಧು–ಬಳಗ



# ಅಭಿನಂದನೆಗಳು



**ದಿನೇಶ್ ಕೆ ಶೆಟ್ಟಿ**
ಅಧ್ಯಕ್ಷರು,
ದಾವಣಗೆರೆ ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರ
ದಾವಣಗೆರೆ

**ಎ. ನಾಗರಾಜ್**
ಸದಸ್ಯರು,
16ನೇ ವಾರ್ಡ್
ಮಹಾನಗರ ಪಾಲಿಕೆ
ದಾವಣಗೆರೆ

ಸಮಾಜ ಸೇವೆಗಾಗಿ ದಾವಣಗೆರೆ ಮಹಾನಗರ ಪಾಲಿಕೆ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ವತಿಯಿಂದ 69ನೇ ಕನ್ನಡರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ

**ಷಾ|| ಕುಂದನ್‌ಮಲ್ ಓಂಕಾರ್‌ಮಲ್‌ಜಿ ಜೈನ್ ರಾಥೋಡ್**

ಖಜಾಂಚಿ ಶ್ರೀ ಭಗವಾನ್ ಮಹಾವೀರ್ ಗೋಶಾಲೆ, ಆವರಗೆರೆ ಇವರಿಗೆ

**ಹೃತ್ಪೂರ್ವಕ ಅಭಿನಂದನೆಗಳು**

- ಡಾ|| ಆಲೂರು ಮಂಜುನಾಥ್
- ಎಚ್ ಎ ವೆಂಕಟೇಶ್ ಮೂರ್ತಿ, ಎಪಿಎಂಸಿ ವರ್ತಕರು
- ಕುಂಬ್ಳೂರ್ ಪ್ರಸನ್ನ ಕುಮಾರ್
- ಮಾಲತೇಶ್, ಮಾಲೀಕರು, ಮಾಲತೇಶ್ ಫರ್ನೀಚರ್ಸ್
- ಮಾಲತೇಶ್ (ಮಾಲಿ)
- ಗೋಪಾಲ್ (ಅಂತು)
- ಶ್ರೀಕಾಂತ್ ಬಗೆರೆ
- ಯುವರಾಜ್
- ಚೇತನ್ ಕುಮಾರ್ (ಅನಾಹುತ)
- ಬಸವರಾಜ್
- ರಾಜು ಭಂಡಾರಿ ಅಧ್ಯಕ್ಷರು, ರಿದ್ಧಿ ಸಿದ್ಧಿ ಫೌಂಡೇಶನ್
- ಅಣಬೇರು ಜಗದೀಶ್, ಎಪಿಎಂಸಿ ವರ್ತಕರು
- ಡಿ ಎನ್ ಜಗದೀಶ್, ಮಾಜಿಸದಸ್ಯರು ಮಹಾನಗರ ಪಾಲಿಕೆ ದಾವಣಗೆರೆ
- ಕಾಯಿ ಗುರುನಾಥ್
- ಎಸ್ ವಿಜಯ್ ಕುಮಾರ್ ಜೈನ್
- ಕೇರಂ ಗಣೇಶ್
- ಮಧು ಪವಾರ್
- ಹನುಮಂತಪ್ಪ
- ರೈತರ ಬೀದಿ ಪರಶುರಾಮ್
- ಚೇತನ್ (ಜಿಂಟಾ)
- ಪ್ರವೀಣ್ ಕುಮಾರ್
- ರವಿ
- ಶಿವಾಜಿ ರಾವ್
- ಸತೀಶ್ ಶೆಟ್ಟಿ
- ಸುರೇಶ್

**ಪದ್ದು ಕಟ್ಟೆ ಗೆಳೆಯರ ಬಳಗ**

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas